ನಿನ್ನೆ ತಾನೆ, ಸುಮಾರು 24 ಗಂಟೆಗಳ ಹಿಂದೆ ಈ ವರದಿಯೂ ನನ್ನ ಕೈಸೇರಿದೆ. ಸರ್ಕಾರ ಇದರ ಅಧ್ಯಯನವನ್ನು ಮಾಡುತ್ತಿದೆ. ಎಲ್ಲಾ ಸದಸ್ಯರುಗಳು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇವರ ಬೇರೆ ಬೇರೆ ಸಲಹೆಗಳಿಂದ ಇದಕ್ಕೆ ಹೆಚ್ಚು ಮಹತ್ವ ಮತ್ತು ಗಾಂಭೀರ್ಯ ಬಂದಿದೆ. ಇದನ್ನು ಪರಿಶೀಲನೆ ಮಾಡಿ ಮುಂದೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತೇನೆ. ನಂತರ ಈ ಬಗ್ಗೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : – ಈ ಬಗ್ಗೆ ವರದಿಯನ್ನು ಯಾವಾಗ ಮಂಡಿಸುತ್ತೀರಿ?

ಅಧ್ಯಕ್ಷರು : – ಈಗ ಸದನವನ್ನು 2.45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನದ ವಿರಾಮಕ್ಕೆ 1 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2.45 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಪುನಃ ಅಪರಾಹ್ನ 3 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಪೀಠವನ್ನು ಅಲಂಕರಿಸಿದರು)

4. ವಿತ್ತೀಯ ಕಾರ್ಯಕಲಾಪ

2011–12ನೇ ಸಾಲಿನ ಪೂರಕ ಅಂದಾಜುಗಳ (3ನೇ ಮತ್ತು ಅಂತಿಮ ಕಂತು) ಕುರಿತು ಚರ್ಚೆ ಮತ್ತು ಸರ್ಕಾರದ ಉತ್ತರ.

ಅಧ್ಯಕ್ಷರು : – ಮಾನ್ಯ ಮುಖ್ಯಮಂತ್ರಿಗಳೇ ವಿವರಿಸಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : – ಮಾನ್ಯ ಸಭಾಧ್ಯಕ್ಷರೆ, 2011–12ನೇ ಸಾಲಿನ 3ನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜಿಗೆ ಸಂಬಂಧಪಟ್ಟಂತೆ ಸದನದ ಮುಂದೆ ಮಂಡಿಸುತ್ತಿದ್ದೇನೆ. ಮತ್ತು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. 3ನೇ ಮತ್ತು ಅಂತಿಮ ಕಂತು 2011–12ನೇ ಸಾಲಿಗೆ ಒಟ್ಟು ರೂ. 4177.77 ಕೋಟಿಗಳ ಬೇಡಿಕೆಯನ್ನು ಸದನದ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಕೇಂದ್ರದ ಸಹಾಯ ಧನ ಮೊತ್ತ ರೂ. 97 ಕೋಟಿಗಳು ಮತ್ತು ಲೆಕ್ಕ ಹೊಂದಾಣಿಕೆ ಮೊತ್ತ ರೂ. 97 ಲಕ್ಷಗಳು ಇದಲ್ಲದೆ hand recoveries ಸುಮಾರು ರೂ. 2095 ಕೋಟಿಗಳು, ಸಾಮಾನ್ಯ ರಾಜಸ್ವದಿಂದ ಬರಬಹುದಾದಂಥ ನಿವ್ವಳ ಮೊತ್ತ ರೂ. 3984.73 ಕೋಟಿಗಳು

ಆಗುತ್ತದೆ. ಪೂರಕ ಅಂದಾಜುಗಳು 2011-12ರ ಪ್ರಮುಖ ಯೋಜನೆಗಳು ಹಲವಾರು ಇವೆ. ಬಾಕಿ ಎಲ್ಲಾ ಯೋಜನೆಗಳನ್ನು ಅದರಲ್ಲಿ ಉಲ್ಲೇಖ ಮಾಡಿದ್ದೇನೆ. I.P. ಪಂಪ್‌ಸೆಟ್ಟುಗಳ ಪೂರೈಕೆಗಾಗಿ ಸುಮಾರು ರೂ. 700 ಕೋಟಿಗಳು, ರಾಜ್ಯ ಹೆದ್ದಾರಿ ಮತ್ತು ರಸ್ತೆ ಕಾಮಗಾರಿಗಳಿಗೆ ಸುಮಾರು ರೂ. 509 ಕೋಟಿಗಳು, ವಿದ್ಯುಚ್ಛಕ್ತಿ ಬಳಕೆಯಲ್ಲಿ ಹೂಡಿಕೆ ಸುಮಾರು ರೂ. 500 ಕೋಟಿಗಳು, ಗ್ರಾಮೀಣ ಸಂಪರ್ಕ ಸುಮಾರು ರೂ. 382 ಕೋಟಿಗಳು, ಬೆಳೆ ಸಾಲಕ್ಕೆ ಬಡ್ಡಿ ಸಹಾಯಧನ ರೂ. 350 ಕೋಟಿಗಳು, ಭಾಗ್ಯಲಕ್ಷ್ಮಿ ಯೋಜನೆಗೆ ರೂ. 350 ಕೋಟಿಗಳು, ಸುವರ್ಣ ಗ್ರಾಮ ರೂ. 200 ಕೋಟಿಗಳು, ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ಸುಮಾರು ರೂ. 100 ಕೋಟಿಗಳು, ಮೆಟ್ರೋ ರೈಲು ಸುಮಾರು 96 ಕೋಟಿಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ರೂ. 1084 ಕೋಟಿಗಳು, ನ್ಯಾಯಾಲಯದ ತಡೆಗಳಿಗೆ ಸುಮಾರು ರೂ. 71 ಕೋಟಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಗೆ ರೂ. 61 ಕೋಟಿಗಳು, ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳು ಸುಮಾರು ರೂ. 60 ಕೋಟಿಗಳು, ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆಗೆ ಸಾಲ ರೂ. 58 ಕೋಟಿಗಳು, ಸಮಗ್ರ ವಸತಿ ಮತ್ತು ಕೊಳಚೆ ಅಭಿವೃದ್ಧಿ ಯೋಜನೆಗೆ ಸುಮಾರು ರೂ. 56 ಕೋಟಿಗಳು, ಬೆಳಗಾವಿಯಲ್ಲಿ ಮಿನಿ ವಿಧಾನಸೌಧ ರೂ. 50 ಕೋಟಿಗಳು, ಗ್ರಾಮೀಣ ರಸ್ತೆಗಳಿಗೆ ರೂ. 50 ಕೋಟಿಗಳು, ಕೆ.ಪಿ.ಟಿ.ಸಿ.ಎಲ್.ಗೆ ರೂ. 50 ಕೋಟಿಗಳು ಹೀಗೆ ಒಂದಷ್ಟು ಒಟ್ಟು ಮೊತ್ತ ರೂ. 6177.70 ಕೋಟಿಗಳ ಈ 3ನೇ ಕಂತಿನ ಪೂರಕ ಅಂದಾಜಿಗೆ ಅನುಮೋದನೆಗಾಗಿ ಸದನವನ್ನು ಕೋರುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಮಗ್ಯಾರಿಗೂ ಮಾಹಿತಿ ಬೇಡವೆ? ಈ ಸದನದ ಸದಸ್ಯರಿಗೆ ಮಾಹಿತಿ ಬೇಕೋ ಬೇಡವೋ? ರೂ. 6177.70 ಕೋಟಿಗಳ ಪೂರಕ ಅಂದಾಜಿನ ಬಗ್ಗೆ ಮಾಹಿತಿ ಬೇಡವೇ?

ಅಧ್ಯಕ್ಷರು :- ನಿನ್ನೆಯ ಅಜೆಂಡಾದಲ್ಲಿ ಕಳುಹಿಸಿ ಕೊಟ್ಟಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನನಗೆ ದೊರೆತಿಲ್ಲ. ನನಗೂ ಒಂದು ಪ್ರತಿ ಕೊಡಿ.

ಅಧ್ಯಕ್ಷರು :- ಆಯಿತು. ಒಂದು ಪ್ರತಿ ಕೊಡೋಣ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಮಂತ್ರಿಗಳು ಆಗಿರುವುದರಿಂದ ಈ ಪೂರಕ ಅಂದಾಜುಗಳನ್ನು ಮಂಡಿಸಿದ್ದಾರೆ. ಇದನ್ನು 3ನೇ ಕಂತು ಎಂದು ಮಂಡಿಸುತ್ತಿದ್ದಾರೆ. ಈಗಾಗಲೇ 2 ಕಂತುಗಳನ್ನು ಮಂಡಿಸಿದ್ದಾರೆ. ಸ್ವಲ್ಪ

ಅದೆಲ್ಲದರ ಲೆಕ್ಕ ಕೊಡಬೇಕು, 2 ಕಂತುಗಳ ದುಡ್ಡು ಏನಾಗಿದೆ ಎನ್ನುವುದು? ಎಷ್ಟು ಜಮೆ? ಎಷ್ಟು ಖರ್ಚು ಮಾಡಿದ್ದಾರೆ? ಈ ಬಜೆಟ್‌ನಲ್ಲಿ ರೂ. 83 ಸಾವಿರ ಕೋಟಿಗಳು ಎಂದು ಹೇಳಿ ಆಯವ್ಯಯ ಅಂದಾಜುಗಳನ್ನು ಮಾಡಿದ್ದೀರಿ. ಆಯವ್ಯಯದಲ್ಲಿ ನೀವು ಬಜೆಟ್ ಪುಸ್ತಕದಲ್ಲಿ ಏನು ಮಾಡಿದ್ದೀರಿ ಎಂದರೆ ಬಜೆಟ್ ಮಂಡಿಸಿರುವುದರಲ್ಲಿ ವಾರ್ಷಿಕ ವಿತ್ತ ನಿರೂಪಣೆಯನುಸಾರ ಎಂದು ಕೆಳಗಡೆ ಒಂದು ಹೊಸ ಲೈನ್ ಸೇರಿಸಿದ್ದೀರಿ ಇದರಲ್ಲಿ, ಪುಟ ಸಂಖ್ಯೆ 70, ಇದರಲ್ಲಿ 2011–12ನೇ ಸಾಲಿಗೆ ಅಂದಾಜು ರೂ. 83728 ಕೋಟಿ 79 ಲಕ್ಷ ಎಂದು ಹೇಳಿದ್ದೀರಿ. ಮತ್ತೆ ಪರಿಷ್ಕೃತ ಅಂದಾಜಿನಲ್ಲಿ revised estimates ನಲ್ಲಿ ರೂ. 78 ಸಾವಿರದ 439 ಕೋಟಿ 65 ಲಕ್ಷಗಳು ಎಂದು ಹೇಳಿದ್ದೀರಿ. ನೀವು ಇಲ್ಲಿ ಬಜೆಟ್ ಎಸ್ಟಿಮೇಟ್ಸ್‌ಗಿಂತ ಪರಿಷ್ಕೃತ ಅಂದಾಜಿನಲ್ಲಿ ಕಡಿಮೆ ಆಗಿರುವಾಗ ಇವೆಲ್ಲಾ ಎಲ್ಲಿ ಖರ್ಚು ಮಾಡಿದ್ದೀರಿ? 2 ಸಾರಿ ಖರ್ಚು ಮಾಡುವುದಕ್ಕೆ ಇಲ್ಲಿ ಅನುಮೋದನೆ ತೆಗೆದುಕೊಂಡಿದ್ದೀರಿ. ಖರ್ಚುಗಳ ಬಗ್ಗೆ ನಮಗೆ ಹೇಳಬೇಕು. ಸುಮಾರು ರೂ.10 ಸಾವಿರ ಕೋಟಿ ತೆಗೆದುಕೊಂಡಿದ್ದೀರಿ. 3 ಕಂತುಗಳಲ್ಲಿ 10 ಸಾವಿರ ಕೋಟಿ, ಅವೆಲ್ಲಾ ಎಲ್ಲಿದೆ? ಸ್ವಲ್ಪ ನೀವು ಇದನ್ನೆಲ್ಲಾ ಹೇಗೆ ಕ್ರೋಢೀಕರಣ ಮಾಡಿದ್ದೀರಿ? ತೆರಿಗೆ ಎಷ್ಟು ವಸೂಲಾಗಿದೆ ಹೆಚ್ಚಾಗಿ To meet this additional expenditure, unforeseen expenditure ನೀವು ಮಾಡಬೇಕಾದರೆ total ಇರುವುದೇ ಬಜೆಟ್ ಪುಸ್ತಕದಲ್ಲಿ ರೂ. 78 ಸಾವಿರ ಕೋಟಿಗಳು, ನಿಮ್ಮ revised estimateನಲ್ಲಿ ಬಹಳ confusion ಇದೆ. I want to know, ನಿಮ್ಮ ಬಜೆಟ್ ಪುಸ್ತಕದಲ್ಲಿ ಪುಟ ಸಂಖ್ಯೆ 70, ಕೆಳಗೆ ಕನ್ನಡದ ಪುಸ್ತಕ, ಇಂಗ್ಲೀಷಿನದ್ದಲ್ಲ. ಅದರಲ್ಲಿ ಜಮೆಗಳು ಎಂದು ಒಂದು ಲೈನ್ ಇದೆ. ವಾರ್ಷಿಕ ವಿತ್ತ ನಿರೂಪಣೆ ಎಂದು, ಬಜೆಟ್ ಪುಸ್ತಕದ ಜೊತೆಗೆ, Annual Finance Statement ಒಂದು ಪುಸ್ತಕ ಬರುತ್ತದೆ. ಅದರ ಪ್ರಕಾರ ಅಂತ ಇಲ್ಲಿ ಬರೆದಿದ್ದೀರಿ. ಜಮೆಗಳು – ಬಜೆಟ್ ಅಂದಾಜು ರೂ. 83728 ಕೋಟಿಗಳು, ಆದರೆ ಪರಿಷ್ಕೃತ ಅಂದಾಜಿನಲ್ಲಿ ರೂ. 78439 ಕೋಟಿಗಳು ಎಂದು ಇದೆ. ಅಂದರೆ ಸುಮಾರು ರೂ. 5000 ಕೋಟಿ ಕಡಿಮೆ ಆಯಿತು revised estimate ನಲ್ಲಿ ಮತ್ತೆ ಇದನ್ನು ಸೇರಿಸಿ ರೂ. 10 ಸಾವಿರ ಕೋಟಿ ತೆಗೆದುಕೊಂಡಿದ್ದೀರಿ. ಇವೆಲ್ಲಾ ಒಂದಕ್ಕೊಂದಕ್ಕೆ ತಾಳಮೇಳ ಇಲ್ಲವಲ್ಲ. ಇದು ಮತ್ತೆ 3ನೇ ಕಂತಿನಲ್ಲಿ ಸಾವಿರ ಚಿಲ್ಲರೆ ಕೋಟಿ ಕೇಳುತ್ತಿದ್ದೀರಿ. ಇನ್ನೆರಡು ಮೂರು ದಿನ ಇದೆ. ಹೇಗೆ ಖರ್ಚು ಮಾಡುತ್ತಾರೆ? ಎಲ್ಲಾ ತೆಗೆದುಕೊಂಡು ಕೊನೆಯಲ್ಲಿ ಖರ್ಚು ಮಾಡಿದರೆ ಹೆಚ್ಚಾಗಿ ತಿಂದು ಬಿಡುತ್ತಾರೆ. ಅದಕ್ಕೆ ಹೋದ

ಸಾರಿ ಯಡಿಯೂರಪ್ಪನವರು ಹೇಳಿದರು. ಹೋದ ಸಾರಿ ಬಜೆಟ್ ಮಂಡಿಸುವಾಗ ಮಾಜಿ ಮುಖ್ಯಮಂತ್ರಿಗಳು ಫೆಬ್ರವರಿಯಲ್ಲಿ ಮಂಡಿಸಿ ಬಿಟ್ಟರು. ಯಾಕೆಂದರೆ ಕಡೆಯಲ್ಲಿ ಖರ್ಚಾಗುವುದನ್ನು ತಡೆಗಟ್ಟುವ ಸಲುವಾಗಿ ಫೆಬ್ರವರಿಯಲ್ಲಿ ಮಂಡಿಸುತ್ತಿದ್ದೇವೆಂದರು. ಇದೇನಾ ತಡೆಗಟ್ಟಿದ್ದು? ಫೆಬ್ರವರಿಯಲ್ಲಿಯೇ ಮಂಡಿಸಿದರು ಬಜೆಟನ್ನು ಪಾಪ. ನಾನು ಪ್ರತಿ 2 ತಿಂಗಳಿಗೊಮ್ಮೆ Performance revies ಮಾಡುತ್ತೇನೆ. What is the outlay? What is the ourcome? ಇದನ್ನೆಲ್ಲಾ ನೋಡುತ್ತೇನೆ ಎಂದು. ಎಲ್ಲಿದೆ? outlay ಇಲ್ಲ, outcome ಇಲ್ಲ, outlay ಗಳಿವೆ, no outcome. ಮಾನ್ಯ ಅಧ್ಯಕ್ಷರೆ ನಾನು ಇಲ್ಲಿ ಒಪ್ಪಿಗೆ ಕೊಡುವುದು ಈ ರಾಜ್ಯದ ಅಭಿವೃದ್ಧಿ ಆಗಲಿ ಎಂಬ ಕಾರಣಕ್ಕೆ. ಒಂದು ಕಡೆ ಬರಗಾಲ ಇದೆ, ಕುಡಿಯುವ ನೀರಿಲ್ಲ, ದನಕರುಗಳಿಗೆ ಮೇವಿಲ್ಲ. ಇವರು 172 ಕೋಟಿ ದುಡ್ಡು ಬಿಡುಗಡೆ ಮಾಡಿದ್ದೇವೆ ಎನ್ನುತ್ತಾರೆ. ಖರ್ಚು ಆಗಿರುವುದು ಬಹಳ ಕಡಿಮೆ ದುಡ್ಡು. 75 ಕೋಟಿನೋ ಎಷ್ಟೋ ಖರ್ಚಾಗಿದೆ ಇವತ್ತಿನವರೆಗೆ. ಇವರು ಇಷ್ಟೊಂದು ದುಡ್ಡು ತೆಗೆದುಕೊಳ್ಳುತ್ತಾರೆ. ಮತ್ತೆ ಯಾಕೆ ಕುಡಿಯುವ ನೀರಿಗೆ ದುಡ್ಡು ಕೊಟ್ಟಿಲ್ಲ ಇವರು? ಯಾಕೆ discipline ಹೋಗಿ ಬಿಟ್ಟಿದೆ ಬಜೆಟ್‌ನಲ್ಲಿ, ಎಂದರೆ ಸಂಬಳ ಕೊಡುವುದಕ್ಕೂ ಕೇಳುತ್ತಾರೆ, pension ಕೊಡುವುದಕ್ಕೂ ಕೇಳುತ್ತಾರೆ. Constituion ನಲ್ಲಿ Article 205 ಇರುವುದು ಯಾಕೆಂದರೆ ಯಾವುದೋ ಒಂದು ಕಾರ್ಯಕ್ರಮಕ್ಕೆ ನಾವು ಕೊಟ್ಟ ದುಡ್ಡು ಸಾಲದೆ ಹೋದರೆ ಅದಕ್ಕೆ ಒದಗಿಸಲು ಅಥವಾ ಯಾವುದೋ ಒಂದು ಹೊಸ ಕಾರ್ಯಕ್ರಮ ಮಾಡಬೇಕಾಗಿ ಬಂದಾಗ ದುಡ್ಡು allocation ಮಾಡಬೇಕಾದರೆ ಇದನ್ನು ಮಾಡಬೇಕು. ಸಾಕಾಗದಿದ್ದರೆ ಅಥವಾ unforeseen programme ಮಾಡಬೇಕಾದರೆ ಅದರ ಖರ್ಚಿಗೆ ಏನಾದರೂ ಬಂದರೆ ಇದನ್ನು ಮಾಡಬೇಕು. ಇಲ್ಲಿ ಏನು ಮಾಡಿದ್ದಾರೆಂದರೆ ಪೇಜ್ ನಂ. 74 ಮಾನ್ಯ ಮುಖ್ಯಮಂತ್ರಿಗಳೇ ರೂ. 37 ಕೋಟಿ ದೇವಸ್ಥಾನಗಳಿಗೆ ಎಂದು ಇಟ್ಟಿದ್ದೀರಿ. ಅದು ನನಗೆ ಅರ್ಥವಾಗಲಿಲ್ಲ. ನೀವು ಮೈಸೂರಿಗೆ ಬಂದಿದ್ದೀರಿ. ಸವಲತ್ತುಗಳ ಕಾರ್ಯಕ್ರಮ ಮಾಡಲಿಕ್ಕೆ. ರೂ. 85 ಲಕ್ಷ ಖರ್ಚು ಎಂದು ಇಲ್ಲಿ ಹಾಕಿಕೊಂಡಿದ್ದೀರಿ. 85 ಲಕ್ಷ ಏತಕ್ಕೆ ಖರ್ಚು ಮಾಡಿದಿರಿ? ಬಸ್ಸುಗಳಲ್ಲಿ ಜನರನ್ನು ಕರೆದುಕೊಂಡು ಬರಲಿಕ್ಕೆ. ಕೆ.ಎಸ್.ಆರ್.ಟಿ.ಸಿ. ಬಸ್ engage ಮಾಡಿದ್ದು. ಅದಕ್ಕೂ ಒಪ್ಪಿಗೆ ಕೊಡಬೇಕಾ ನಾವಿಲ್ಲಿ? ಮೈಸೂರಿನ function ಪೇಜ್ ನಂ. ಎಷ್ಟದು? 85 ಲಕ್ಷಕ್ಕೆ ಅದನ್ನು ಕೂಡಾ ಈ ಬಜೆಟ್‌ನಲ್ಲಿ ಕೇಳಿದ್ದೀರಿ. ಪೇಜ್ ನಂ. 74 ನೋಡಿ ಮಾನ್ಯ

ಅಧ್ಯಕ್ಷರೆ, Revenue demand No. 14, page No. 74, an amount of Rs. 85 lakhs has been sanctioned for meeting the expenditure in connection with the programme called "ಸರ್ಕಾರಿ ಸವಲತ್ತುಗಳ ಸಂತೆ" ಏನು ಹಾಸ್ಯಾಸ್ಪದವಾಗಿ ಕಾಣುವುದಿಲ್ಲವೇನು ಇದು? ಇದು Budgetary discipline ಒಳಗೆ ಬರುತ್ತದೆಯೇನು? Fiscal discipline ಒಳಗೆ ಬರುತ್ತದೆಯೇನು ಇದೆಲ್ಲಾ? ಇದಕ್ಕೆ ನಾವು ಒಪ್ಪಿಗೆ ಕೊಡಬೇಕೇನು? ಇದನ್ನು ನಾನು ವಿರೋಧ ಮಾಡುತ್ತೇನೆ. I am seriously opposing this type of demand. ಆಮೇಲೆ ಪೇಜ್ ನಂ, 76, Item No. 22 Revenue ನಲ್ಲಿ ದೇವಸ್ಥಾನ ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಸಹಾಯಧನ ನೀಡಲು 37, ಇದು ನೋಡಿ, ಮಾನ್ಯ ಮುಖ್ಯಮಂತ್ರಿಗಳೆ, ನಾನು ಇದನ್ನೆಲ್ಲಾ ಹೇಳುವುದಕ್ಕೆ ಕ್ಷಮಿಸಬೇಕು. Discretionary grants ಜಾಸ್ತಿಯಾಗಿದೆ. It is not coming within the purview of the Fiscal discipline. ನಿಮ್ಮ ಮಂತ್ರಿಗಳು ಯೋಗೇಶ್ವರ್ constituency ನಲ್ಲಿ ಸುಮಾರು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. 5–5 ಲಕ್ಷ, 5–5 ಲಕ್ಷ, 5–5 ಲಕ್ಷ. 26 ಕೋಟಿ ಯಾಕೆ? Sir, I can't understand. ನಾನು Finance Minister ಆಗಿದ್ದಾಗ ಈ ತರಹ discretionary grants ಇರಲಿಲ್ಲ. How they are getting? Then what about the other Members? ಒಂದು ಕಡೆ ನಂಜುಂಡಪ್ಪನವರ ವರದಿ ನಾವು regional imbalance ಎಂದು ಭಾಷಣ ಮಾಡುತ್ತೇವೆ. ಕೇಂದ್ರ ಸರ್ಕಾರದವರು Backward regions development ಗೋಸ್ಕರ ಹಣ ಕೊಡುತ್ತಾರೆ. 5 ಜಿಲ್ಲೆಗಳಿಗೆ ಪ್ರತಿ ವರ್ಷ ದುಡ್ಡು ಕೊಡುತ್ತಾರೆ. ನಿಮಗೆ ಇಷ್ಟ ಬಂದ ಹಾಗೆ ಯಾರ್ಯಾರಿಗೆ ಬೇಕೋ ಅವರಿಗೆ ದುಡ್ಡುಗಳನ್ನು ಚೆಲ್ಲುತ್ತೀರಿ. ದೇವಸ್ಥಾನಗಳಿಗೆ ದುಡ್ಡು ಹಾಕುತ್ತೀರಿ. ಇದನ್ನು ನಾವು ಒಪ್ಪಬೇಕಾ? Is this the way of spending the public money, Tax payer's money? ಸರ್ಕಾರ ಎಂದ ತಕ್ಷಣವೇ ಅವರ ಮನಸ್ಸೋ ಇಚ್ಛೆ ಖರ್ಚು ಮಾಡಬಹುದು ಎಂದಲ್ಲ. ಚರ್ಚೆಯಾಗಬೇಕು. ಖರ್ಚು ಇಲ್ಲಿ ನಾವು approve ಮಾಡಿಕೊಡಬೇಕು. ಅದು ಒಳ್ಳೆಯ ಕೆಲಸಕ್ಕೋಸ್ಕರ ಉಪಯೋಗವಾಗಬೇಕು. 5–5 ಲಕ್ಷ ರೂ. ಯಾರಿಗೋ ಬೇಕಾದವರಿಗೆ ಕೊಟ್ಟುಕೊಳ್ಳುತ್ತಾರೆ. ಯಾಕೆಂದರೆ ಟೆಂಡರೂ ಕರೆಯುವುದಿಲ್ಲ. ಅದಕ್ಕೋಸ್ಕರವೇ ಮಾಡುವುದು. Transparency Act exemption ಒಳಗೆ ಹೇಗೆ ಬರುತ್ತದೋ ಹಾಗೆ ಮಾಡಿಕೊಂಡು ಬಿಟ್ಟಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ

ವ್ಯಾಪ್ತಿಯಲ್ಲಿ ಬರುವಂತಹ ಗ್ರಾಮಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗಳ ಪಟ್ಟಿ. ದಾಸವಾರ ಪಂಚಾಯಿತಿಗೆ. ನೋಡಿ ಎಲ್ಲಾ 5–5 ಲಕ್ಷ. 5–5 ಲಕ್ಷ. ಒಟ್ಟು ಎಷ್ಟು item ಇದೆ ಎಂದರೆ 5 ಲಕ್ಷದ್ದು 528 ಕಾಮಗಾರಿಗಳು. 528x5 ಲಕ್ಷ ಇದಕ್ಕೆ ನಾವು approve ಕೊಡಬೇಕಾ? ಇದು ಯಾವ regional imbalance ತೆಗೆದು ಹಾಕಲು ಕೊಟ್ಟಿರುವುದು? ನೀವು ಒಂದು ಕಡೆ inclusive growth ಎಂದು ಭಾಷಣ ಮಾಡುತ್ತೀರಿ. ಸರ್ವರಿಗೂ ಸಮಪಾಲು, ಸಮಬಾಳು ಆಗಬೇಕು ಎಂದು. ಇನ್ನೊಂದು ಕಡೆ ಆ gap widen ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ಇದನ್ನು ನೋಡಿ 500 ಚಿಲ್ಲರೆ 5–5 ಲಕ್ಷ work ಎಂದರೆ ಯಾವುದರಲ್ಲಿ ಬರುತ್ತದೆ.

ಶ್ರೀ ಹೆಚ್. ಹಾಲಪ್ಪ :– ಒಂದೇ ಕ್ಷೇತ್ರಕ್ಕೆ ಕೊಟ್ಟಿದ್ದಾರೆಯೇ?

ಶ್ರೀ ಸಿದ್ದರಾಮಯ್ಯ :– ಅದು ಏನು ಹೇಳಿ ಹಾಲಪ್ಪನವರೆ, ಬಹಳ ದಿನದಿಂದ ನೀವು ಮಾತನಾಡುವುದನ್ನು ಬಿಟ್ಟು ಬಿಟ್ಟಿದ್ದೀರಿ. ಒಂದೇ ಕ್ಷೇತ್ರಕ್ಕೆ ಮಾರಾಯರೆ, ನಿಮ್ಮ ಕ್ಷೇತ್ರಕ್ಕೇನಾದರೂ ಕೊಟ್ಟಿದ್ದಾರೆಯೇನು? ಮತ್ತೆ ನಿಮ್ಮ ಕ್ಷೇತ್ರಕ್ಕೆ ಬೇಡವೇನು?

ಶ್ರೀ ಎಂ.ಚಂದ್ರಪ್ಪ :– ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾ–ಗಿದ್ದಾಗ ನೀವು by-election ಗೆ ನಿಂತುಕೊಂಡಿದ್ದಾಗ ನಿಮ್ಮ ಕ್ಷೇತ್ರಕ್ಕೂ ಕೊಟ್ಟಿದ್ದರು. ನಾವು ಬಂದಿದ್ದವಲ್ಲ, sir.

ಶ್ರೀ ಸಿದ್ದರಾಮಯ್ಯ : – ಹೌದೌದು, ಈಗ ನಿಮ್ಮ ಕ್ಷೇತ್ರಕ್ಕೂ ಬಂದಿದೆಯಾ? ನೀವು ಗೆಲ್ಲುವುದಕ್ಕೋಸ್ಕರ ಕೊಟ್ಟಿದ್ದರೇನು? ಆಯಿತು. ಕುಮಾರಸ್ವಾಮಿ ತಪ್ಪು ಮಾಡಿದರು ಎಂದು ನೀವು ಮಾಡುತ್ತೀರೇನಪ್ಪ? ನೀವು ಸುಮ್ಮನೆ ಕುಳಿತುಕೊಳ್ಳಿ. ಇದರ ಅರ್ಥ ಚುನಾವಣೆಯಲ್ಲಿ ಗೆಲ್ಲುವುದಕ್ಕೋಸ್ಕರ ಕೊಟ್ಟಿದ್ದರೇನು? There must be some yardstick ಹಣ ಖರ್ಚು ಮಾಡುವುದಕ್ಕೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ ಈ ತರಹದ್ದು ಬಹಳ constituency ಗಳಲ್ಲಿ ನಡೆಯುತ್ತಿದೆ. ಹಾಗಾದರೆ ಪಾಪ ಇಲ್ಲಿರುವ ಬೇರೆ ಎಂ.ಎಲ್.ಎ. ಗಳೆಲ್ಲಾ ಏನು ಮಾಡಬೇಕು? ಅವರು ಕೇಳುತ್ತಾರೆ. ಚನ್ನಪಟ್ಟಣದವರು ತೆಗೆದುಕೊಂಡು ಬಂದಿದ್ದಾರೆ, ನೀವು ಏನು ಮಾಡುತ್ತಿದ್ದೀರಿ ಎಂದು ನಿಮಗೆ 3 ಕಾಸಿನ ಮರ್ಯಾದೆ ಇಲ್ಲ ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ನಿಮ್ಮ ಮೇಲೆ ನಾನು ಆರೋಪ ಮಾಡುತ್ತಿಲ್ಲ. ದುಡ್ಡು ಕೊಟ್ಟು ಹಣ ಮಂಜೂರು ಮಾಡಿಸಿಕೊಳ್ಳುತ್ತಿದ್ದಾರೆ. It is a fact. ಬೇಕಾದರೆ ಕೇಳಿ, ಕೆಲವು

ಎಂಎಲ್‌ಎಗಳು ನಾಚಿಕೊಂಡು ಹೇಳುವುದಿಲ್ಲ. ಅವರೇ ದುಡ್ಡು ಕೊಟ್ಟು ಮಾಡಿಸಿಕೊಂಡಿದ್ದಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಸಾರ್, ಅದನ್ನು ಹೇಳುತ್ತಾರೆ. ಎಂಎಲ್‌ಎಗಳಿಗೆ ಯೋಗ್ಯತೆ ಇಲ್ಲ. ನೋಡಿ ಅಲ್ಲಿ ಜೂನಿಯರ್ ಇಂಜಿನಿಯರ್ ಈ ತರಹ ಬ್ರೋಕರ್ ಕೆಲಸ ಮಾಡುವವರೆಲ್ಲಾ ತಂದು ಮಾಡುತ್ತಾರೆ ಎಂದು ನಮ್ಮನ್ನು ಅವಮಾನ ಮಾಡುತ್ತಾರೆ. ಅದು ಆ ಪಕ್ಷದವರು ಈ ಪಕ್ಷದವರು ಎಂತಲ್ಲ, ಎಲ್ಲಾ ಪಕ್ಷದಲ್ಲಿದೆ. ಈ ಅವಮಾನವನ್ನು ಸಹಿಸಿಕೊಂಡು ಇದ್ದೇವೆ. ದಯಮಾಡಿ, ಇದು ಆಗಬಾರದು.

ಶ್ರೀ ಸಿದ್ದರಾಮಯ್ಯ :– ನಿಮ್ಮ ಕಾಲದಲ್ಲಿ ಹೀಗೆ ಆಗಬಾರದು ಮಾನ್ಯ ಸದಾನಂದಗೌಡರವರೆ. ಹೀಗೆ ಆಗಬಾರದು. Ultimately ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ ಎನ್ನುವುದು ಬಹಳ ಮುಖ್ಯ.

ಶ್ರೀ ಗೋವಿಂದ ಕಾರಜೋಳ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು) :– ದುಡ್ಡು ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ ಎನ್ನುವುದು ಸರಿಯಲ್ಲ ಸಾರ್ ದಯವಿಟ್ಟು.

ಶ್ರೀ ಸಿದ್ದರಾಮಯ್ಯ :– ಈಗ ಒಂದು ಕೆಲಸ ಮಾಡಿ. You are a good friend of mine. ನಾನು ಪ್ರೂವ್ ಮಾಡಿ ಬಿಟ್ಟರೆ ನೀವು ರಾಜೀನಾಮೆ ಕೊಡುತ್ತೀರಾ ಅಥವಾ ಇಲ್ಲ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಗೋವಿಂದ ಕಾರಜೋಳ :– ಸಾರ್, ಸಾರಾಸಗಟಾಗಿ ಹೀಗೆ ಹೇಳಬಾರದು.

ಶ್ರೀ ಸಿದ್ದರಾಮಯ್ಯ :– ನಾನು ಒಂದು incident Proue ಮಾಡುತ್ತೇನೆ. ನೀವು ರಾಜೀನಾಮೆ ಕೊಡಿ, ಇಲ್ಲ ನಾನು ರಾಜೀನಾಮೆ ಕೊಡುತ್ತೇನೆ. ಒಪ್ಪಿಕೊಳ್ಳುತ್ತೀರಾ?

ಶ್ರೀ ಗೋವಿಂದ ಕಾರಜೋಳ :– ನಾನು ಆ ರೀತಿ ಏನಾದರೂ ತೆಗೆದುಕೊಂಡಿದ್ದರೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ :– ನಿಮಗಲ್ಲ. ನಾನು ನಿಮಗೆ ಹೇಳಿದ್ದೇನಾ? Did I make any allegation against you ?

ಶ್ರೀ ಗೋವಿಂದ ಕಾರಜೋಳ :– ನೀವು ನನ್ನ against ಮಾಡಿಲ್ಲ, ಆದರೆ ಸಾರಾಸಗಟಾಗಿ ಹೀಗೆ ಹೇಳಿದರೆ ತಪ್ಪು ಅಲಿಗೇಷನ್ ಆಗುತ್ತದೆ.

ಶ್ರೀ ಸಿದ್ದರಾಮಯ್ಯ :– ಕುಂಬಳಕಾಯಿ ಕಳ್ಳ ಎಂದರೆ ನೀವ್ಯಾಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ? ನಿಮ್ಮ ಮೇಲಲ್ಲ ಅಲಿಗೇಷನ್, ಕುಳಿತುಕೊಳ್ಳಿ. It is going on.

ಶ್ರೀ ಸಿ.ಎಸ್. ಪುಟ್ಟೇಗೌಡ :– ಖಂಡಿತ ಇದು ನಡೆಯುತ್ತಿದೆ. ನಾವು ಬೇಕಾದರೆ ಸಾಕ್ಷಿ ಹಿಡಿದುಕೊಂಡು ಬಂದು ಕೊಡುತ್ತೇವೆ.

ಶ್ರೀ ಗೋವಿಂದ ಕಾರಜೋಳ :– ನೀವೇ ನಮ್ಮ ಹತ್ತಿರ ಬಂದು ಕೆಲಸ ಮಾಡಿಸಿಕೊಳ್ಳುತ್ತೀರಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : – ರಾಜ್ಯದಲ್ಲಿ ಹಾಗೆ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : – ಮಾನ್ಯ ಮುಖ್ಯಮಂತ್ರಿಗಳೇ, it is a very bad culture. If this type of work culture is developed, it is very difficult to change it. ಆಮೇಲೆ ಯಾವ ಬ್ರಹ್ಮ ಬಂದರೂ ಬದಲಾಯಿಸುವುದಕ್ಕೆ ಆಗುವುದಿಲ್ಲ. ಲೆಜಿಸ್ಲೇಚರ್ ಇರುವುದು ಏಕೆ? ನಾವು ಶಾಸಕರು ಇರುವುದು ಏಕೆ? ಬಜೆಟ್ ಮಂಡಿಸುವುದು ಏಕೆ? ಚರ್ಚೆ ಮಾಡುವುದು ಏಕೆ? ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗಳು ಏಕೆ ಇರಬೇಕು. I am very sorry. ಈ ತರಹದ್ದು ಎಲ್ಲಾ ಆಗಬಾರದು. ಈಗ Rural Development Department ಗೆ, Energy Department ಗೆ ಹೀಗೆ ಎಲ್ಲಾ ಇಲಾಖೆಗಳಿಗೆ ರೂ. 200 ಕೋಟಿ, ರೂ. 300 ಕೋಟಿ, ರೂ. 500 ಕೋಟಿ ಸಪ್ಲಿಮೆಂಟರಿಯಲ್ಲಿ ಕೊಡುತ್ತಿದ್ದೇವೆ. ರಸ್ತೆಗಳಿಗೆ, new roads ಮಾಡುವುದಕ್ಕೆ ಅದೆಷ್ಟೋ 500 ಕೋಟಿ ರೂಪಾಯಿಗಳು ಇರುತ್ತದೆ. PWD ನಲ್ಲಿ ಮತ್ತೆ Rural Development ಇಲಾಖೆಯಲ್ಲಿ ಇರುತ್ತದೆ. 500 ಕೋಟಿ ರೂಪಾಯಿಯನ್ನು ಯಾರ್ಯಾರಿಗೆ ಹಂಚಿದ್ದಾರೆ? ಹೇಗೆ ಹಂಚಿದ್ದಾರೆ? ಏತಕ್ಕೆಂದು ಅಲ್ಲಿ ಬರೆದಿರುವುದಿಲ್ಲ. New Roads ಎಂದು ಒಂದು ಹೆಡ್ ಇದೆ. Page 128, Demand No. 20 ನಲ್ಲಿ 508.50 ಲಕ್ಷ new roads ಗೆ ಇದೆ. ನಾವು ಹೇಗೆ ಇದಕ್ಕೆ ಒಪ್ಪಿಗೆ ಕೊಡುವುದು? New roads ಯಾವುದಿದು? ಹೊಸದಾಗಿ ಮಾಡುತ್ತಿರುವುದು ಎಲ್ಲರಿಗೂ ಸಿಕ್ಕಿರಬೇಕಲ್ಲ. ಇದು ಒಂದು ಕಡೆ. ಅದಕ್ಕೇ ನಾನು ಹೋದ ಸಾರಿ ಹೇಳಿದೆ. ಒಂದಕ್ಕೊಂದು ತಾಳ ಮೇಳ ಇರುವುದಿಲ್ಲ. 2008–09ರ ಎಜಿ ರಿಪೋರ್ಟ್ ತೆಗೆದು ನೋಡಿ. Unspent money 11 ಸಾವಿರ ಕೋಟಿ ರೂಪಾಯಿ ಇದೆ. ಆಮೇಲೆ 2010–11 ರಲ್ಲಿ ರೂ. 12,364/– ಕೋಟಿ unspent money ಇದೆ. ಮತ್ತೆ ಇವೆಲ್ಲ ಏಕೆ ಅಪ್ರೂವ್ ಮಾಡಿಸಿಕೊಳ್ಳುತ್ತೀರಿ? It is not fair. It is not my observation. It is the observation made by the AG. Can you call it as financial discipline? ಇದಕ್ಕೆ

financial discipline ಇದೆ ಎಂದು ಹೇಳಬೇಕೇ? ಇದಕ್ಕೆ fiscal discipline? ಎಂದು ಕರೆಯಬೇಕಾ? Finance ವಿಚಾರ ಇರುವುದರಿಂದ ಇದಕ್ಕೆ ಒಪ್ಪಿಗೆ ಕೊಡುವುದು ಬೇರೆ. It is a different thing, but we are unhappy about all these things. ಇಂತದ್ದಕ್ಕೆಲ್ಲಾ ಅವಕಾಶ ಇರಬಾರದು. ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ತರಹದ culture ಏನು develop ಆಗುತ್ತಿದೆಯಲ್ಲಾ, system build up ಆಗುತ್ತಿದೆಯಲ್ಲಾ, it is very dangerous. Democracyಗೆ dangerous. Parliamentary system ಗೆ ತೊಂದರೆ ಆಗುತ್ತದೆ. ದಯವಿಟ್ಟು ನಿಮ್ಮ ಕಾಲದಲ್ಲಿ ಈ ತರಹ ಆಗಬಾರದು. ಇಂತದ್ದಕ್ಕೆಲ್ಲಾ ಇತಿಶ್ರೀ ಹಾಡಬೇಕು. ಅದನ್ನು ಹೇಳಿ ನನ್ನ ವಿರೋಧವನ್ನು ವ್ಯಕ್ತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಸಭಾಧ್ಯಕ್ಷರೆ, ಯಾವ ಸಂದರ್ಭದಲ್ಲಿ ನಾವು supplementary estimates ತರಬೇಕು ಎನ್ನತಕ್ಕದ್ದು ಈಗ ಸಂವಿಧಾನದಲ್ಲಿ ಅಡಕವಾಗಿದೆ. ಸಂವಿಧಾನದ ಆಶಯದಂತೆ ಇವತ್ತು ನೀವು ಸದನದ ಮುಂದೆ ತಂದಿದ್ದೀರಿ. ನಾವು ಸದನದ ಮುಂದೆ ತರಬೇಕಾದಾಗ ಇದು ಮೂರನೇ ಬಾರಿ supplementary estimates ಅನ್ನು ತಂದಿದ್ದೀರಿ. ಮೂರನೇ ಬಾರಿ supplementary estimates ಅನ್ನು 6177 ಕೋಟಿ ರೂಪಾಯಿಗಳಿಗೆ ತಂದಿದ್ದೀರಿ. ನಮ್ಮ ಉದ್ದೇಶ ಏನು? ತೆರಿಗೆ ಮುಖೇನ ಬರತಕ್ಕ ಒಂದೊಂದು ರೂಪಾಯಿ ಕೂಡ ಸದನದ ಒಪ್ಪಿಗೆಯಿಂದ ಖರ್ಚಾಗಬೇಕು. ಖರ್ಚು ಮಾಡಬೇಕಾದಾಗ ತನ್ನದೇ ಆದಂತಹ ನಿಯಮಾವಳಿಗಳು ಇರಬೇಕು. ಆ ನಿಯಮಾವಳಿಗಳ ಪ್ರಕಾರ ಮತ್ತು ಸದನದಲ್ಲಿ ಮಂಡಿಸಿದಂತಹ ಬಜೆಟ್ ಇರಬಹುದು, ಪಾಲಿಸಿ ಇರಬಹುದು, ಆ ಪಾಲಿಸಿಯ ಪ್ರಕಾರ ಹಣ ಖರ್ಚಾಗಬೇಕು, ಅದು ಕಾನೂನು ರೀತಿ ಖರ್ಚಾಗಬೇಕು ಎನ್ನತಕ್ಕದ್ದು ಆಸೆ. ಆದರೆ ಏನಾಗುತ್ತದೆ, Supplementary estimates ಅನ್ನು ಒಂದು ಸಾರಿ 8 ಸಾವಿರ ಕೋಟಿ, ಒಂದು ಸಾರಿ 10 ಸಾವಿರ ಕೋಟಿ, ಇನ್ನೊಂದು ಸಾರಿ 6 ಸಾವಿರ ಕೋಟಿ, ಈ ತರಹ ನೀವು ಮೂರು ಬಾರಿ ಅದನ್ನು ತರುತ್ತೀರಿ. ತರುವುದರಿಂದ ಏನಾಗುತ್ತದೆಂದರೆ ಎಲ್ಲೋ ಒಂದು ಕಡೆ ನಿಮ್ಮ financial management, budget control ಇಲ್ಲ ಎನ್ನತಕ್ಕ ಭಾವನೆ ಬರುತ್ತದೆ. ಬಹುಶಃ Finance Department ಗೆ ನಮ್ಮ ಕರ್ನಾಟಕದ ಇಲಾಖೆಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಗೌರವ ಇದೆ. ಆದರೆ ಎಲ್ಲೋ ಒಂದು

ಕಡೆಗೆ financial statement ಮಾಡುವಂತಹ ಸಂದರ್ಭದಲ್ಲಿ ನೀವು ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಮುಂದೆಯೂ ಹೋಗುತ್ತೀರಿ. ನಿಮಗೆ ಅನೇಕ ರೀತಿಯಾದ ಮಾರ್ಗದರ್ಶನಗಳು ಸಿಗುತ್ತದೆ, ಚರ್ಚೆ ಮಾಡುತ್ತೀರಿ. ಅದಾಗ್ಯೂ ಕೂಡ ಈ ರೀತಿಯಾದ ತಪ್ಪುಗಳು ಆಗುತ್ತವೆ ಎನ್ನುವುದು ಸರಿಯಲ್ಲ. ಯಾವ ಸಂದರ್ಭದಲ್ಲಿ ನೀವು ಇದನ್ನು ಮಾಡಬಹುದು ಎಂದು ಹೇಳಿದರೆ ನಿಮಗೆ ಯಾವುದೋ ಒಂದು ಯೋಜನೆಗೆ ಹಣ ಕೊಟ್ಟಿರುತ್ತೀರಿ, ಅದು ಕಡಿಮೆ ಆದಂತಹ ಸಂದರ್ಭದಲ್ಲಿ ನೀವು ಮಾಡಬಹುದು ಅಥವಾ ಯಾವುದೇ ಹೊಸ ಯೋಜನೆಗಳು ಅಥವಾ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ, ಬಂದಂತಹ ಸಂದರ್ಭದಲ್ಲಿ adjust ಮಾಡಬೇಕಾದಾಗ ಮಾಡುವುದಕ್ಕೆ ಬರುತ್ತದೆ. ಆದರೆ ಮೂಲ ಯೋಜನೆಗಳಲ್ಲಿ ನೀವು ಏನೇ ಮಾಡಬೇಕಾದರೂ ಕೂಡ ಒಂದು ಪ್ಲಾನಿಂಗ್ ಇರಬೇಕಾಗುತ್ತದೆ. ನೀವು ಪ್ಲಾನ್ ಪ್ರಕಾರವೇ ಖರ್ಚು ಮಾಡಬೇಕಾಗುತ್ತದೆ. ನಾನು ಒಂದೇ ಒಂದು ನಿದರ್ಶನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. Demand No.3 ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆದ ಸಣ್ಣ ಮತ್ತು ಅತಿ ಸಣ್ಣ ಸಾಲಗಾರರ ಪರಿಷ್ಕೃತ ಹೊಂದಾವಳಿ ತೀರುವಳಿಗಾಗಿ ಯೋಜನೆಯ ಅವಧಿಯನ್ನು 31.03.2012 ರವರೆಗೆ ವಿಸ್ತರಿಸಲಾಗಿದೆ. ಈ ಯೋಜನೆಯ ಸಾಲಗಾರರು ಪಾವತಿಸುವ ಹಣಕ್ಕೆ ಸಮನಾದ ಮೊತ್ತವನ್ನು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಷೇರು ಬಂಡವಾಳ ರೂಪದಲ್ಲಿ ನೀಡಬೇಕಾಗಿದೆ. ಅದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ಅವಕಾಶ ಮಾಡಿಕೊಂಡಿಲ್ಲವಾದ್ದರಿಂದ ಯೋಜನೆಗೆ 2 ಕೋಟಿಗಳನ್ನು ಸೇರಿಸಲಾಗಿ-ರುತ್ತದೆ. ಅಂದರೆ ಪಾಲಿಸಿ ಇತ್ತು. 31.03.2012 ರವರೆಗೂ ಕೂಡ ಕೊಡಬೇಕೆಂದು ಹೇಳಿ ಯೋಜನೆ ಇದ್ದಾಗ ಏಕೆ ಅದಕ್ಕೆ ಪ್ರಾವಿಷನ್ ಮಾಡಲಿಲ್ಲ? ಅದು ಹೋಗಲಿ. ನೀವು ಹೊಂದಾಣಿಕೆ ಮಾಡುತ್ತೀರಿ. ಯಾವುದರಿಂದ ತರಿಸುತ್ತೀರಿ ಎಂದು ಹೇಳಿದರೆ ನೀವು ನೀರಾವರಿ ನಿಗಮಗಳಿಗೆ ಹೂಡುವ ಬಂಡವಾಳದ ಮೊತ್ತದಲ್ಲಿ ಅಧ್ಯಾರ್ಪಣೆ ಮಾಡಲಾಗುವುದು. ನೀರಾವರಿ ನಿಗಮದಿಂದ ಹಣವನ್ನು ತೆಗೆದುಕೊಂಡು ಇವತ್ತು ಕೊಡುತ್ತಾರೆ ಎಂದರೆ ಹೇಗೆ? ಇದಕ್ಕೇನಾದರೂ ನೀತಿ ಇದೆಯೇ? ಮಾರ್ಗ ಇದೆಯೇ? ಒಂದು reasoning ಇದೆಯೇ? ಯಾವ ರೀತಿ ಮಾಡುತ್ತಿದ್ದೀರಿ? ಇದೊಂದು ನಿದರ್ಶನ ಮಾತ್ರ. ಕೆಲವೊಂದು ನಿದರ್ಶನಗಳನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಈಗಾಗಲೇ ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ. Rural Development and Panchayath Raj ನಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ

382 ಕೋಟಿ 25 ಲಕ್ಷ ರೂ.ಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ. ನೀವು ಬಂಡವಾಳದಲ್ಲಿ, revenue ನಲ್ಲಿ 191 ಕೋಟಿ ರೂ.ಗಳಿಗೆ provision ಮಾಡಿದ್ದೀರಿ. Capital ನಲ್ಲಿ ಪುನಃ 67 ಕೋಟಿ ರೂ.ಗಳಿಗೆ provision ಮಾಡಿ, ಒಟ್ಟಾರೆ, ನೀವು ಬಂಡವಾಳವನ್ನು 341 ಕೋಟಿ ರೂ. ಗಳಿಗೆ ತರುತ್ತೀರಿ. ಇದನ್ನು ಏಕೆ ಮಾಡುತ್ತಿದ್ದೀರಿ? ಈಗಾಗಲೇ ಹೇಳಿದ್ದೇವೆ. ಯಾವುದೋ ಚನ್ನಪಟ್ಟಣದಂತಹ ಒಂದು ಕ್ಷೇತ್ರದಲ್ಲಿ, ಯಾರೋ ಒಬ್ಬರು ಶಾಸಕರಿಗೋಸ್ಕರ ಇದನ್ನು ಮಾಡಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದರು. ನಾನು ಹೇಳುತ್ತೇನೆ ಬಹುಶಃ ನೀವು ವಿಧಾನ ಸಭೆಯ ಮುಂದೆ ಬಂದಾಗ, ಎಲ್ಲರ ಅಭಿಪ್ರಾಯವೇನೆಂದರೆ; ಕಣ್ಣುಮುಚ್ಚಿಕೊಂಡು ಒಪ್ಪಿಬಿಡುತ್ತಾರೆ, finance bill ಗೆ ಯಾರೂ oppose ಮಾಡುವುದಿಲ್ಲ. ಯಾರೂ ಅದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಭಾವಿಸಿದ್ದೀರಿ. ಸದನದ ಮುಂದೆ ಇದನ್ನು ತೆಗೆದುಕೊಂಡು ಹೋದರೆ ಆಯಿತು. ಹೇಗೂ ಕಾನೂನಿನಲ್ಲಿ ಅವಕಾಶವಿದೆ, ಅದನ್ನು ಬಳಸಿಕೊಂಡು ಇದನ್ನು approve ಮಾಡಿಕೊಂಡು ಬಿಡೋಣ, ಹೋಗಿದ್ದಕ್ಕೆಲ್ಲಾ ಅಲ್ಲಿ ಕೈ ಎತ್ತುತ್ತಾರೆ ಎನ್ನುವಂತಹ ಭಾವನೆ ಏನಿದೆ, ಅದು ಹೋಗಬೇಕಾಗುತ್ತದೆ. ಈಗ ನಾನು ಕೇಳುತ್ತೇನೆ. ನೀವು ಯಾವುದೋ ಒಂದು ಕ್ಷೇತ್ರ, ಚನ್ನಪಟ್ಟಣವೊಂದಕ್ಕಲ್ಲ, ಇದೇ ರೀತಿಯಾಗಿ ಇರತಕ್ಕಂಥ ಯಾವ್ಯಾವ ಕ್ಷೇತ್ರಗಳಿಗೆ ನೀವು ಎಷ್ಟೆಷ್ಟು ಕೊಟ್ಟಿದ್ದೀರಿ? ಯಾವ್ಯಾವ ರೀತಿಯಲ್ಲಿ ಅದಕ್ಕಾಗಿ action plan ಗಳನ್ನು ಮಾಡಿದ್ದೀರಿ? ಅದನ್ನು ಸಮರ್ಪಕವಾಗಿ ಮಾಡಿದ್ದೀರಾ? ಸದನದ ಜವಾಬ್ದಾರಿ ಏನೆಂದರೆ, ಒಂದೊಂದು ರೂಪಾಯಿಯ demandಗೆ ಒಪ್ಪಿಗೆ ಕೊಡುವುದರ ಜೊತೆಗೆ, ಅದು ಸಮರ್ಪಕವಾಗಿ ಖರ್ಚಾಗಿದೆಯೇ, ಇಲ್ಲವೆ ಎಂದು ನೋಡಬೇಕಾದ ಜವಾಬ್ದಾರಿ ಸಹ ನಮ್ಮದಾಗಿದೆ. ಇದು wise spending ಆಗಬೇಕು. ಅದನ್ನು ನೋಡುವುದಕ್ಕೋಸ್ಕರವೇ ಈ ಸದನವಿದೆ. ಆದರೆ, ಕೊನೇ ಗಳಿಗೆಯಲ್ಲಿ ಬಂದು, ನಾವು ರಸ್ತೆಗಳಿಗೋಸ್ಕರ ಇಷ್ಟು ಹಣವನ್ನು ಪಡೆಯುತ್ತಿದ್ದೇವೆ ಎಂದರೆ ಸರಿಯಾಗುವುದಿಲ್ಲ. ಬಹುಶಃ ನಿಮ್ಮ ಉತ್ತರದಲ್ಲಿ ಯಾರಿಗೆ ಖರ್ಚು ಮಾಡುತ್ತಿದ್ದೀರಿ? ಎಲ್ಲಿ ಖರ್ಚು ಮಾಡುತ್ತಿದ್ದೀರಿ? ಯಾರಿಗೋಸ್ಕರ ಖರ್ಚು ಮಾಡುತ್ತಿದ್ದೀರಿ? ಅದಕ್ಕೆ ನಿಮ್ಮ action plan ready ಇದೆಯೇ ಎಂಬುದನ್ನು ನೀವು ಹೇಳಬೇಕಾಗುತ್ತದೆ. ಇವತ್ತು 27ನೇ ತಾರೀಖು. ಇದು *approve* ಆಗಿ, Government Order ಆಗಿ, ಯಾವಾಗ ನೀವು ಈ ದುಡ್ಡನ್ನು ಗ್ರಾಮೀಣ ರಸ್ತೆಗಳಿಗೆ ಖರ್ಚು ಮಾಡುತ್ತೀರಿ? ಇದನ್ನು ನೀವು ನಿಜವಾಗಿಯೂ ಕೂಡ ಖರ್ಚು ಮಾಡುತ್ತೀರಾ? ನೀವು ಇಲ್ಲಿ

ಮಾಡಿರುವುದೇನು? ಸ್ವಾಮಿ, ನಾನು ಒಂದನ್ನು ಒಪ್ಪಿಕೊಳ್ಳುತ್ತೇನೆ. ಇದರಿಂದ ಏನಾದರೂ asset creation ಆಗುತ್ತಿದೆಯೇ? 5 ಲಕ್ಷ ರೂ.ಗಳಂತೆ 528 ಕಾಮಗಾರಿಗಳನ್ನು ಕೊಟ್ಟಿದ್ದೀರಿ. ಒಂದೇ ಊರಿಗೆ 4–5 ಕಾಮಗಾರಿಗಳನ್ನು ಕೊಟ್ಟಿದ್ದೀರಿ. ಕಾಮಗಾರಿಗಳನ್ನು split up ಮಾಡಿ, 26.40 ಕೋಟಿ ರೂ.ಗಳನ್ನು ಕೊಡುತ್ತೇವೆ ಎಂದು ನೀವು ಹೇಳಿದರೆ ಹೇಗೆ? ನಾನು ನಿಮಗೆ ಇದೊಂದನ್ನು ಮಾತ್ರವೇ ಉದಾಹರಣಗೆಯಾಗಿ ಹೇಳುತ್ತಿದ್ದೇನೆ. ನೀವು ಖರ್ಚು ಮಾಡಬೇಕಾದಾಗ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರುತ್ತಿದ್ದೀರಿ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯ ಏನಾದರೂ ಬೇಕೆ? ನಿಮಗೆ ಯಾರಿಗೆ ಬೇಕೋ ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ. ಇದಕ್ಕೆ ನಾವು ಒಪ್ಪಿಗೆ ಕೊಡಬೇಕೆ? ಇದಕ್ಕೆ supplementary estimates ಎಂದು ಕರೆಯಬೇಕೆ? ಇದನ್ನು ನೀವು ಯೋಚನೆ ಮಾಡಿ. ದಯಮಾಡಿ ನಾನು ಹೇಳುತ್ತೇನೆ. ಹಿಂದೆ ತಾವು ಒಪ್ಪಿಗೆಗಾಗಿ ಈ ಸದನದ ಮುಂದೆ ತಂದ ಸಂದರ್ಭದಲ್ಲಿ, ನಾವು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ನೀವು ಒಂದು ಮಾತನ್ನು ಹೇಳಿದ್ದಿರಿ. ಅದು ನನಗೆ ಜ್ಞಾಪಕವಿದೆ. ಪೂರಕ ಬಜೆಟ್ total expenditure ಗಿಂತ 10% ಮೀರಬಾರದು ಎಂದಿದ್ದೆವು. ಈಗ ಮೂರು ಬಾರಿ ನೀವು ಈ ಸದನದ ಮುಂದೆ ಒಪ್ಪಿಗೆ ತೆಗೆದುಕೊಂಡಿದ್ದೀರಿ. ಅದು ಶೇಕಡ ಎಷ್ಟಾಗಿದೆ? ಏಕೆ ಈ ರೀತಿಯಾಗುತ್ತಿದೆ? Ultimately ಇದು ಏನಾಗುತ್ತದೆ ಎಂದರೆ; ಈಗಾಗಲೇ ಮಾನ್ಯ ಸಿದ್ದರಾಮಯ್ಯನವರು ಹೇಳಿದರು. Salary ಯನ್ನೂ ಸಹ ನೀವು anticipate ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಹೇಗೆ? ಅದನ್ನೂ ನೀವು supplementary estimates ನಲ್ಲಿ ತರುತ್ತೀರಿ ಎಂದರೆ ಹೇಗೆ? ಇದೇನು ಎಂದು ನನಗೆ ಅರ್ಥವಾಗುವುದಿಲ್ಲ. ಇಂತಹ ವಿಚಾರಕ್ಕೋಸ್ಕರ ಇದನ್ನು ತರುವುದೇ? ಬಜೆಟ್ಟಿನಲ್ಲಿ ಒಂದು ಪಾಲಿಸಿಯನ್ನು ನೀವು ಮಾಡಿದಾಗ, ಆ ಬಜೆಟ್ಟಿನ ಆಶಯದಂತೆ ಕಾಮಗಾರಿಗಳು ಆಗಬೇಕು, ಅದಕ್ಕೋಸ್ಕರ ಹಣವನ್ನು ವೆಚ್ಚ ಮಾಡಲು ಇವತ್ತು ನಾವು ಒಪ್ಪಿಗೆ ಕೊಟ್ಟಿರುತ್ತೇವೆ. ಆ ಪ್ರಕಾರ ಖರ್ಚು ಆಗಬೇಕೆ ವಿನಾಃ ಬೇಕಾಬಿಟ್ಟಿ ಖರ್ಚು ಮಾಡತಕ್ಕ ಪ್ರಶ್ನೆಯಲ್ಲ. ಇನ್ನು ಮೇಲಾದರೂ ಕೂಡ ಬದಲಾವಣೆ ಮಾಡತಕ್ಕ ರೀತಿಯಲ್ಲಿ ನೀವು ಹೋಗಬೇಕು. ನಮ್ಮ ಬಜೆಟ್ ಕಂಟ್ರೋಲ್ ಅನ್ನು, management practices ಅನ್ನು improve ಮಾಡಿಕೊಳ್ಳುವುದಕ್ಕೆ ನೀವು ಗಮನವನ್ನು ಕೊಡಬೇಕು. ಅಧ್ಯಕ್ಷರೆ, ಬಹಳ ಮುಖ್ಯವಾಗಿ ಇನ್ನೊಂದು ಹೇಳುವುದಾದರೆ, Agriculture Departmentನಲ್ಲಿ ನೀವು ಹಣವನ್ನು ಹೇಗೆ ಖರ್ಚು

ಮಾಡುತ್ತೀರಿ? ಯಾರಿಗೋಸ್ಕರ ಖರ್ಚು ಮಾಡುತ್ತೀರಿ? ಯಾರಿಗೆ ಇದರಿಂದ ಲಾಭವಾಗುತ್ತದೆ ಎನ್ನುವುದು ಬಹಳ ಮುಖ್ಯವಾದುದು. Agricultre Departmentನಲ್ಲಿ ಒಂದು tender ಅನ್ನು ಕರೆಯುತ್ತಾರೆ. ಮಾನ್ಯ ಉಮೇಶ್ ಕತ್ತಿಯವರೆ, ಬೀದರ್, ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಿಗೆ 1920 ಕಾಮಗಾರಿಗಳಿಗೆ ಒಂದೇ ಟೆಂಡರ್ ಕರೆಯುತ್ತಾರೆ. ಬೀದರ್‌ನಲ್ಲಿ 480, ಗುಲ್ಬರ್ಗಾದಲ್ಲಿ 960 ಮತ್ತು ಬಿಜಾಪುರದಲ್ಲಿ 480 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗುತ್ತದೆ. ಅದಕ್ಕೆ Government of India share 19 ಕೋಟಿ 20 ಲಕ್ಷ ರೂ.ಗಳಾಗಿದೆ. ಅದರಲ್ಲಿ farmer's share ಎಷ್ಟು ಎಂದರೆ, 3 ಕೋಟಿ 84 ಲಕ್ಷ ರೂ.ಗಳು. ಒಟ್ಟು 23 ಕೋಟಿ ರೂ.ಗಳಿಗೆ ಟೆಂಡರ್ ಕರೆಯುತ್ತಾರೆ. ತಮಾಷೆ ಏನೆಂದರೆ, ಇದೊಂದು single tender ಆಗಿದೆ. ಒಂದೇ ಟೆಂಡರ್ ಇದಕ್ಕಾಗಿ ಕರೆಯುತ್ತಾರೆ. ಎಲ್ಲಾದರೂ ಉಂಟೇ? ನೀವು farm pond ಅನ್ನು ಮಾಡುವುದಕ್ಕೆ ನೀವು ಟೆಂಡರ್ ಕರೆಯುತ್ತೀರಿ. ಮೂರು ಜಿಲ್ಲೆಯಲ್ಲಿ 1920 places ನಲ್ಲಿ ಅವನು ಎಲ್ಲಿ ಮಾಡುತ್ತಾನೆ? ತಮಾಷೆ ಎಂದರೆ, ಆ ಟೆಂಡರ್‌ನಲ್ಲಿ ಬಹಳಷ್ಟು ಸೇರಿದೆ. Farm pond including excavation, laying of geo membrane HDP film of 500 micron. Government of India is giving this money. ಈ HDP film ಅನ್ನು ಹಾಕಿ farm pond ಅನ್ನು ಮಾಡಬೇಕು. It is a good concept. ಅದನ್ನು execute ಮಾಡಬೇಕಾಗಿರುವವರು ಯಾರು? ನಿಮ್ಮ ಜಿಲ್ಲಾ ಪಂಚಾಯಿತಿಗಳು ಏತಕ್ಕಾಗಿ ಇವೆ? ತಾಲ್ಲೂಕು ಪಂಚಾಯಿತಿಗಳು ಏತಕ್ಕಾಗಿ ಇವೆ? ಗ್ರಾಮ ಪಂಚಾಯಿತಿಗಳು ಏತಕ್ಕಾಗಿ ಇವೆ? ಅವರ್ಯಾರಿಗೂ ಇದನ್ನು ನೀವು ಕೊಡುವುದಿಲ್ಲ. Single tender ಕರೆಯುತ್ತೀರಿ. Single tender ಹಾಕಿ ನೀವು ಮಾಡುತ್ತೇವೆ ಎಂದು ಹೇಳಿದರೆ, ಏನಾಗುತ್ತದೆ? Really, ಈ ಬಗ್ಗೆ ನೀವು ಹೇಳಿ. Can anybody manage it? ಯಾವುದೇ ಇಲಾಖೆಯವರೂ ಸಹಿತ ಇದನ್ನು manage ಮಾಡುವುದಕ್ಕಾಗುವುದಿಲ್ಲ. ಇದು execute ಆಗುತ್ತದೆಯೇ? ಇದನ್ನೇ ನಾನು ಕೇಳುತ್ತಿರುವುದು. ಇಲ್ಲಿ ಒಂದೇ ಸಿಂಗಲ್ ಟೆಂಡರ್ ಕೊಟ್ಟಿದ್ದೀರಿ. The tender accepting authority reserves the right to reject the tender even after opening of the technical bid or commercial bid without assigning any reason whatsoever. What does it mean? ಇದನ್ನು ನಿಮ್ಮ ಅಧಿಕಾರಿಯೊಬ್ಬರ ಗಮನಕ್ಕೆ ತಂದರೆ, ಅವರ ಉತ್ತರ ನೀವು ಕೇಳಬೇಕಾಗಿತ್ತು. ಈ ಬಗ್ಗೆ ನಿಮ್ಮ ಹತ್ತಿರ ಚರ್ಚೆ ಮಾಡೋಣ ಎಂದುಕೊಂಡೆ.

ಆದರೆ ನೀವು ಇರಲಿಲ್ಲ. ನೀವು ಇವತ್ತು ಬಂದಿದ್ದೀರಿ. ಅದಕ್ಕೋಸ್ಕರ ಇವತ್ತು ಇದನ್ನು ನಾನು ಹೇಳಿದೆ. ಇವತ್ತು ಇನ್ನೂ ಅಲ್ಲಿ tender final ಆಗಿಲ್ಲ. ಈ ರೀತಿಯ ಟೆಂಡರ್ ಇದೆ ಬನ್ನಿ ಎಂದು marketing ನಲ್ಲಿ ಅದು ಹರಾಜಾಗುತ್ತಿದೆ. ದಯಮಾಡಿ ಇಂತಹದ್ದಕ್ಕೆ scope ಕೊಡಬೇಡಿ. ಜಿಲ್ಲಾ ಪಂಚಾಯಿತಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಇದನ್ನು ಕೊಡಿ. It is a very good concept. It is Government of India money. ಈ ರೀತಿಯಾಗಿ ನಾಳೆ ನೀವು ಟೆಂಡರ್ ಮಾಡಿಬಿಟ್ಟರೆ, ಯಾರೋ Government of India ದವರು ದುಡ್ಡು ಬಿಡುಗಡೆ ಮಾಡಬೇಕಾದಾಗ, ನೀವು ಎಲ್ಲವನ್ನೂ ಸೇರಿಸಿ, ಮೂರು ಜಿಲ್ಲೆಗಳದ್ದನ್ನು ಒಬ್ಬನಿಗೇ ಟೆಂಡರ್ ಕೊಟ್ಟಿದ್ದೀರಿ, ನಾವು ದುಡ್ಡು ಕೊಡುವುದಿಲ್ಲ ಎಂದರೆ ನೀವು ಏನು ಮಾಡುತ್ತೀರಿ? Are you really spending the Government of India funds? ಇದು ಇಷ್ಟೊತ್ತಿಗೆ ಖರ್ಚಾಗಿರಬೇಕಾಗಿತ್ತು. ಆದರೆ ಅದು ಇಲ್ಲಿಯವರೆಗೂ ಖರ್ಚಾಗಿಲ್ಲ. ಖರ್ಚು ಆಗದೆ ಹಾಗೆಯೇ ಉಳಿದಿದೆ. ಜಿಲ್ಲಾ ಪಂಚಾಯಿತಿಗಳಿಗೆ/ತಾಲ್ಲೂಕು ಪಂಚಾಯಿತಿಗಳಿಗೆ ಕೊಡದಿರುವುದಕ್ಕೆ ಅವರು ಕಾರಣಗಳನ್ನು ಕೊಡುತ್ತಾರೆ. ತಾಲ್ಲೂಕು ಪಂಚಾಯಿತಿಗಳಿಗೆ ಕೊಟ್ಟರೆ, ಅವರು action plan final ಮಾಡಿ, ಅನುಷ್ಠಾನಕ್ಕೆ ತರುವುದಕ್ಕೆ ಬಹಳ ದಿನಗಳಾಗುತ್ತದೆ. ಅದಕ್ಕೋಸ್ಕರ ಸಿಂಗಲ್ ಟೆಂಡರ್ ಮಾಡುತ್ತಿದ್ದೇವೆ ಎನ್ನುತ್ತಾರೆ. No, this is not the answer. ನಾವು ಕೈಯೆತ್ತಿ ಒಪ್ಪಿಗೆ ಕೊಡುವುದರ ಜೊತೆಗೆ, ಎಷ್ಟಮಟ್ಟಿಗೆ ನೀವು ಆ ಹಣವನ್ನು ಖರ್ಚು ಮಾಡುತ್ತಿದ್ದೀರಿ ಎನ್ನುವುದನ್ನು ಕೇಳುವುದಕ್ಕೋಸ್ಕರ ನಾವು ಇಲ್ಲಿ ಇದ್ದೇವೆ ಎಂದು ನಾನು ಹೇಳಬಯಸುತ್ತೇನೆ. Corruption control ಮಾಡಬೇಕಾದರೆ ಹೇಗೆ ಮಾಡುತ್ತೀರಿ? ಇದನ್ನು ಯಾರಾದರೂ ನೋಡುತ್ತಿದ್ದೀರಾ? ದಯಮಾಡಿ ಒಂದು ಮಾತನ್ನು ಹೇಳುತ್ತೇನೆ, ಪ್ರತಿ ಸಂದರ್ಭದಲ್ಲೂ ಪ್ರಸ್ತಾಪವಾಗುತ್ತಿದೆ, ಅಪೆಂಡಿಕ್ಸ್–ಇ ನಮ್ಮ ಹಣಕಾಸು ಇಲಾಖೆಯವರು ಹೇಳುತ್ತಾರೆ, ನಾವು ಹಣ ಕೊಟ್ಟ ಮೇಲೆ, ನಾವು block ಆಗಿ ಇವತ್ತು PWD ಗೆ ಕೊಡುವುದು ಕೊಟ್ಟುಬಿಡುತ್ತೇವೆ, ಕೃಷಿ ಇಲಾಖೆಗೆ ಕೊಡುವುದು ಕೊಟ್ಟು ಬಿಡುತ್ತೇವೆ, ಅವರು ಏನು ಮಾಡುತ್ತಾರೋ ನಮಗೆ ಗೊತ್ತಾಗುವುದಿಲ್ಲವೆನ್ನುತ್ತಾರೆ. ಗೊತ್ತಾಗುವುದಿಲ್ಲವೆನ್ನುವ ಪ್ರಶ್ನೆಯಲ್ಲ, ಅವರೂ ಕೂಡ ಮಾನಿಟರ್ ಮಾಡಬೇಕು. ನಾನು ಸದಾನಂದಗೌಡರಿಗೆ ಹೇಳುವುದೇನೆಂದರೆ, ನೀವು ಅದನ್ನೂ ಕೂಡ ಮಾನಿಟರ್ ಮಾಡುವಂಥ ವಿಶೇಷವಾದಂಥ ಅಧಿಕಾರವನ್ನು ಹಣಕಾಸು ಇಲಾಖೆಗೆ ಕೊಡಿ.

ನಿಯಮಾವಳಿಗಳ ಪ್ರಕಾರವೇ ಖರ್ಚಾಗಬೇಕಾಗುತ್ತದೆ, ಆ ಪ್ರಕಾರ ಮಾಡಬೇಕಾಗುತ್ತದೆ. ಒಂದೊಂದು ಸಾರಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಬಂದಾಗ, ಇವತ್ತು ನಿಮ್ಮ ಹಣಕಾಸು ಇಲಾಖೆಯ ಅಧಿಕಾರಿಗಳೂ ಕೂಡ PWD ಅವರು ಮಾಡುವುದಕ್ಕೋಸ್ಕರ ಕತ್ತು ತಗ್ಗಿಸಬೇಕಾಗುತ್ತದೆ. ನಾನು ಹೇಳುತ್ತೇನೆ, ಅಪೆಂಡಿಕ್ಸ್-ಇ ಅನ್ನು ಉದಾಸಿಯವರೆ, ಯಾವಾಗ ಮಾಡಿರುವುದು? ಅಪೆಂಡಿಕ್ಸ್-ಇ ಮಾಡಿರುವುದು ಫೆಬ್ರವರಿಯಲ್ಲಿ, ಹೋದ ವರ್ಷ ಯಾವುದೋ ಮಾಡಿದ್ದು, ಇನ್ನೂ 15 ದಿವಸ ಇರುವಾಗ ದಯಮಾಡಿ ನಾನು ಹೇಳುತ್ತೇನೆ, ನಾನು ಸದನದಲ್ಲಿ ಬಹಳ ವರ್ಷಗಳಿಂದ ಇರುವಾಗ ಬಜೆಟ್ ಮಂಡನೆಯಾದಾಗ ಅಪೆಂಡಿಕ್ಸ್-ಬಿ ಮತ್ತು ಅಪೆಂಡಿಕ್ಸ್-ಇ ಕೂಡ ಮಂಡನೆಯಾಗುತ್ತಿತ್ತು. 15 ದಿವಸವೋ ತಿಂಗಳೋ ಆಗುತ್ತದೆ. ಅದನ್ನು ಬಿಟ್ಟು ಇನ್ನೇನು ಖರ್ಚಾಗಿ ಒಂದು ವರ್ಷ ಇದೆ ಎನ್ನುವಾಗ ಇವತ್ತು ಟೆಂಡರ್ ಅನ್ನು, ಅಪೆಂಡಿಕ್ಸ್-ಇ ಅನ್ನು ಅಪ್ರೋವ್ ಮಾಡಿದರೆ ಏನು ಪ್ರಯೋಜನವಾಗುತ್ತದೆ? ಅಲ್ಲಿ ಏನಾಗುತ್ತದೆಂದರೆ, ಯಾರಿಗೆ ಬೇಕೋ ಅವರಿಗೆ ಕಾಮಗಾರಿಗಳನ್ನು ಮಾಡುವುದು, ಸದನದ ಒಪ್ಪಿಗೆ ಇಲ್ಲದೆ ಖರ್ಚು ಮಾಡುವುದಕ್ಕೆ ಒಪ್ಪಿಗೆ ಕೊಡುವುದು, ಆಮೇಲೆ ಅಪೆಂಡಿಕ್ಸ್-ಇ ನಲ್ಲಿ ಬರುವುದು, ಈ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ, it is part and parcel of the budget. You cannot do like this. Finance Department ಏನು ಮಾಡುವುದಕ್ಕಾಗುತ್ತದೆ? ಅವರಿಗೆ ಏನೂ ಕಂಟ್ರೋಲ್ ಇಲ್ಲ, ಆಯಾ ಇಲಾಖೆಯವರು ಏನು ಮಾಡುತ್ತಾರೋ ಅದನ್ನೇ ಸಾರಾಸಗಟಾಗಿ ಒಪ್ಪಬೇಕಾದ ಪರಿಸ್ಥಿತಿ, ಇದನ್ನೆಲ್ಲಾ ನೋಡಿ ನಾವು ಒಪ್ಪಿಗೆ ಕೊಡಬೇಕಾ? ದಯಮಾಡಿ, ನೀವು ನಿರಂತರವಾಗಿ ಸದನದ ಮುಂದೆ ಬಂದು ಒಪ್ಪಿಗೆ ತೆಗೆದುಕೊಳ್ಳುವುದು, ಸಂಬಳಕ್ಕೂ ಕೂಡ ಪ್ಲಾನಿಂಗ್ ಮಾಡಲಿಲ್ಲವೆಂದರೆ, ಏನು ಹೇಳಬೇಕು? ನೀವು ಕಂಪ್ಯೂಟರೈಸೇಷನ್ ಮಾಡುತ್ತೀರಿ, ಇ-ಖಜಾನೆ ಎಲ್ಲಾ ಬಂದಿದೆ, ಎಲ್ಲಾ ಮಾಹಿತಿಗಳು ನಿಮ್ಮಲ್ಲಿರಬೇಕಾದ ಸಂದರ್ಭದಲ್ಲೂ ಕೂಡ ಈ ರೀತಿಯಾಗಿ ಸದನದ ಮುಂದೆ ಬರುವುದು ಸರಿಯಲ್ಲ. ಆಮೇಲೆ ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಪ್ರತಿ ವರ್ಷವೂ ಕೂಡ 8 ಸಾವಿರ ಕೋಟಿ, 10 ಸಾವಿರ ಕೋಟಿ, 13 ಸಾವಿರ ಕೋಟಿ unspent balance ಇದೆ. ಸದಾನಂದಗೌಡರೆ, unspent balance ಬಗ್ಗೆ ಎಚ್ಚರಿಕೆ ಇರಬೇಕು. ಇವತ್ತು ನಿಮ್ಮ ಆಸೆ ಏನೋ ಇತ್ತು, ಯಡಿಯೂರಪ್ಪನವರ ರೀತಿಯಲ್ಲಿ 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ನಾನು ಮಂಡನೆ ಮಾಡಬೇಕೆಂದಿತ್ತು,

ಮಾಡಿಬಿಟ್ಟಿದ್ದೀರಿ. 21 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಎತ್ತುತ್ತಿದ್ದೀರಿ, ನಿಮಗೆ ಅಷ್ಟು ಸಾಲ ಸಿಗುವುದಿಲ್ಲ. ಆದರೆ ಇವತ್ತು ಬಜೆಟ್ ಮಂಡನೆ ಮಾಡುವುದರ ಜೊತೆಗೆ ನೀವು ಅಷ್ಟೇ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾದಾಗ ನಿಮ್ಮ ಇಚ್ಛಾಶಕ್ತಿ ಇರಬೇಕಾಗುತ್ತದೆ. Unspent balance ಈ ಸಾರಿ ನೋಡಿ, ಈ ಸದನ ಚುನಾವಣೆಗೆ ಹೋಗದೆ ಹೀಗೆ ಉಳಿದಿದ್ದರೆ ಮುಂದಿನ ಬಜೆಟ್‌ಗೆ ಬಂದರೆ ಕನಿಷ್ಠ 15–20 ಸಾವಿರ ಕೋಟಿ ರೂಪಾಯಿಗಳ unspent balance ಇರುತ್ತದೆ. ಏಕೆಂದರೆ ಯಾವ ಯೋಜನೆಯಲ್ಲಿ ಹಣ ಖರ್ಚಾಗುವುದಿಲ್ಲವೋ ಅಲ್ಲಿಗೆ ದುಡ್ಡು ಕೊಡುವುದು ಖರ್ಚಾಗಲಿಲ್ಲ, head of account ಇಲ್ಲ, Government Order issue ಆಗಲಿಲ್ಲ. ಮತ್ತೇ reallocation ಮಾಡುವುದು, ಅದನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾದ ಗೊಂದಲಗಳನ್ನು ಮಾಡುತ್ತಾರೆ. ಈ ರೀತಿಯಾಗಿ ಮಾಡದೆ, ಇವತ್ತು ಜನರೇನು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ, ಯೋಜನೆಗಳಿಗೆ ಕೊಟ್ಟಿರುವುದು, ನೀವು ಬಜೆಟ್ ಅನ್ನು ಮಂಡನೆ ಮಾಡುವಾಗ, ಜನರು ಇವತ್ತು ನಂಬುತ್ತಾರೆ, ಹೌದಪ್ಪ, ಸದಾನಂದ ಗೌಡರು ಒಂದು ಲಕ್ಷ ಕೋಟಿ ಬಜೆಟ್ ಮಂಡನೆ ಮಾಡಿದರು ಎಂದು. ನಿಜವಾಗಲೂ ಅಷ್ಟು ಪ್ರಮಾಣದಲ್ಲಿ ಪ್ರಾಮಾಣಿಕವಾಗಿ ಚರ್ಚೆಯಾಯಿತಾ ಇಲ್ಲವಾ ಎನ್ನುವ ರೀತಿಯಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗಿರುವ ಜವಾಬ್ದಾರಿಕೆ ಸರ್ಕಾರದ್ದಾಗಿದೆ. ಅಂಥ ಸಂದರ್ಭದಲ್ಲಿ ನಿಮಗೆ ಟೀಕೆ ಮಾಡಬೇಕು, ನಿಮ್ಮನ್ನು ಎಚ್ಚರಗೊಳಿಸಬೇಕಾದ ಜವಾಬ್ದಾರಿಕೆ ನಮ್ಮದಾಗಿರುತ್ತದೆ. ಆ ಕಾರಣಕ್ಕೆ ನಾನು ಹೇಳುತ್ತೇನೆ, ನೀವು ಇವತ್ತು ಈ ರೀತಿ unspent balance 15 – 20 ಸಾವಿರ ಕೋಟಿ ತೋರಿಸುವುದಾದರೆ, ನಾನಾಗಿದ್ದರೆ 2 ಲಕ್ಷ ಕೋಟಿ ಮಂಡನೆ ಮಾಡುತ್ತಿದ್ದೆ ಎಂದು ನಾನು ಹಿಂದೆಯೂ ಹೇಳಿದ್ದೆ. ದಯಮಾಡಿ ಅದಕ್ಕೆ ಅವಕಾಶವಾಗಬಾರದು. ನೀವು ನೋಡಿ, ಹಣಕಾಸು ಇಲಾಖೆಯಲ್ಲಿ ಏನಾಗುತ್ತದೆಂದರೆ, loan from the Government of India, grant from the Government of India outside the budget ಇರುತ್ತದೆ. ಇದೆಲ್ಲವನ್ನೂ ಒಂದು ಕಡೆ ರೂಟ್ ಮಾಡಿ 1 ಲಕ್ಷ ಕೋಟಿ ಆಯಿತೆಂದು ತೋರಿಸಿಬಿಡುವುದು. ಅದನ್ನು ಮಾಡಬಾರದೆಂದು ನಾನು ಹೇಳುವುದಿಲ್ಲ, ಮಾಡಿದರೂ ಕೂಡ, while spending, you should be wise enough to spend. Capital investment ಆಗಬೇಕು, income ಜಾಸ್ತಿಯಾಗಬೇಕು, ನಾವು ಸಾಲ ಮಾಡುತ್ತೇವೆ, ಸೋಲ ಮಾಡುತ್ತೇವೆ, ನಾಡಗೌಡರ ಪ್ರಶ್ನೆ

ಬಂದಾಗ, ನಮ್ಮ ಎಲ್ಲಾ ಸಾಲ ಲಿಮಿಟ್‌ನಲ್ಲೇ ಇದೆ ಎಂದು ಹೇಳಿದಿರಿ. ಸಾಲ ಮಾಡಬೇಡಿ ಎಂದು ಹೇಳಲಿಲ್ಲ. ಮಾಡಿ, ಸಾಲ ಮಾಡುವುದರ ಜೊತೆಗೆ ನಮ್ಮ resources ಅನ್ನು, income ಅನ್ನು ಜಾಸ್ತಿ ಮಾಡುವುದರ ಕಡೆಗೆ ಗಮನ ಕೊಡಬೇಕು. ಇವತ್ತು ನಿಮ್ಮಲ್ಲಿರುವ ರಾಜಕೀಯ ಭಿನ್ನಾಭಿಪ್ರಾಯನೋ, ವ್ಯಾತ್ಯಾಸನೋ, ಆ ಹಿನ್ನೆಲೆಯಲ್ಲಿ ಏನೂ ಕೂಡ ಕಂಟ್ರೋಲ್ ಮಾಡುವುದಕ್ಕಾಗಲಿಲ್ಲ. ಜನರು ಇವತ್ತು ಸಾಯುತ್ತಿದ್ದಾರೆ, ಬರಗಾಲ ಇದೆ. ಹೇಳುವುದಕ್ಕೋಸ್ಕರ ನಂದನ ನಾಮ ಸಂವತ್ಸರ, ನಿಜವಾಗಿಯೂ ಯಾರೂ ಖುಷಿಯಿಂದ ಮಾಡಲಿಲ್ಲ, ಎಲ್ಲಾ ಜನ ಕತ್ತಲಲ್ಲಿದ್ದರು. ವಿದ್ಯುತ್ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ, Finance Bill ಅನ್ನು ಏನಾದರೂ ಮಾಡಿ ಒಪ್ಪಿಗೆ ಕೊಡೋಣವೆಂದು ತಡಕಿದರೆ, ಒಂದು ರೂಪಾಯಿಯನ್ನಾದರೂ ಬರಕ್ಕೆಂದು ಕೊಟ್ಟಿದ್ದೀರಾ? ಪಾಪ, ಶಿವಲಿಂಗೇಗೌಡರು ಬೋರ್ ಕೊರೆಯುವುದಕ್ಕೆ ಬಾಯಿ ಬಡಿದುಕೊಂಡರು. ಒಬ್ಬ ಸದಸ್ಯನಾಗಿರುವವನು ಒಂದು ಕೊಳವೆ ಬಾವಿ ಕೊರೆಯುವುದಕ್ಕೆ ಅಂಗಲಾಚುವ ಪರಿಸ್ಥಿತಿ ಬಂದಿದೆ. ಅದಕ್ಕೆ ಮುಖ್ಯಮಂತ್ರಿಗಳು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೇಳುತ್ತೇನೆಂದು ಹೇಳಿದರು, ಅವರು ಹೇಳಿದರೋ, ಎಷ್ಟರಮಟ್ಟಿಗೆ ಕೇಳಿಸಿಕೊಂಡರೋ, ಎಷ್ಟರಮಟ್ಟಿಗೆ ಬೋರ್ ಕೊರೆದರೋ, ನನಗೆ ಅರ್ಥವಾಗಲಿಲ್ಲ. ದಯಮಾಡಿ, ಇಂಥ ವಿಚಾರದಲ್ಲಿ ಎಲ್ಲೋ ಒಂದು ಕಡೆ ನೀವು grants, savings ತೋರಿಸಿ, ನಾವು ಬರ ಕಾರ್ಯಕ್ಕೆ ಕೊಟ್ಟಿದ್ದೇವೆ, ಕೊಳವೆ ಬಾವಿ ಕೊರೆಯುವುದಕ್ಕೋಸ್ಕರ ನಾನು ಕೊಟ್ಟಿದ್ದೇನೆಂದು ಹೇಳಿ, ಕೊಳವೆ ಬಾವಿ ಕೊರೆಯುವುದಕ್ಕೆ ಕೊಡಬೇಕೆಂದರೆ, 15–20 ವರ್ಷಗಳ ಹಿಂದೆ ಕೊರೆದಿರುವ ಕೊಳವೆ ಬಾವಿಗಳು 250–300 ಅಡಿಯವರೆಗೆ ಇರುತ್ತಿತ್ತು. ಇವತ್ತು ಎಷ್ಟು ಅಡಿಯವರೆವಿಗೂ ಹೋದರು ನೀರು ಸಿಗುತ್ತಿಲ್ಲ. ಅಲ್ಲಿ re-drill ಮಾಡಬೇಕು, ಆಳ ತೋಡಿಸಲೇ ಬೇಕು, ದುಡ್ಡನ್ನು ಹಾಕಲೇ ಬೇಕು, CRF ನಲ್ಲಿ ಅವಕಾಶವಿಲ್ಲ. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಣ ಖರ್ಚು ಮಾಡಬೇಕು, ಅವರ ಹತ್ತಿರ ಹಣವಿಲ್ಲ, ವಿಶೇಷವಾಗಿ ಹಣ ಕೊಡಲು ಅವರಿಂದಾಗುತ್ತಿಲ್ಲ. ಇದೆಲ್ಲಾ ಪ್ರಸಂಗವಿರುವಾಗ, ಇವತ್ತು ನೀವು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ರಸ್ತೆಗಳಿಗೆ ಕೊಡುವುದಕ್ಕೆ ಬದಲು ಕುಡಿಯುವ ನೀರಿಗೆಂದು ಕೊಟ್ಟಿದ್ದರೆ ಸದಾನಂದ ಗೌಡರೆ, ಎಷ್ಟು ಚೆನ್ನಾಗಿರುತ್ತಿತ್ತು, ಎಲ್ಲರಿಗೂ ಖುಷಿಯಾಗುತ್ತಿತ್ತು. ಎಲ್ಲೋ ಒಂದು ಕಡೆ ನಿಮ್ಮ ಪಾಲಿಸಿ, ಪ್ಲಾನಿಂಗ್‌ನಲ್ಲಿ ನೀವು ತಪ್ಪುತ್ತಿದ್ದೀರಿ, ಇಲಾಖೆಯದು ಬಿಡಿ. ನಿಮ್ಮ ಪಾಲಿಸಿ, ಪ್ಲಾನಿಂಗ್ ತಪ್ಪಾಗುತ್ತಿರುವುದರಿಂದಲೇ ಇಲಾಖೆಯವರು ತಪ್ಪು

ಮಾಡುವುದಕ್ಕೆ ಸಾಧ್ಯವಾಗುತ್ತಿದೆ. ನಿಮ್ಮಲ್ಲಿ ಒಂದು ನಿಖರತೆ ಇರಬೇಕಾಗುತ್ತದೆ. ಒಂದು ದೃಢವಾದ ನಿಶ್ಚಯವಿರಬೇಕಾಗುತ್ತದೆ. ತೀರ್ಮಾನವಿರಬೇಕಾಗುತ್ತದೆ. ದಯಮಾಡಿ, ನೀವು ಆ ರೀತಿ ಮಾಡಿದರೆ ಆಗುತ್ತದೆ, ನನಗಂತೂ ಈ ರೀತಿ ಖರ್ಚು ಮಾಡುತ್ತಿರುವುದು ಎಲ್ಲೋ ಒಂದು ಕಡೆ ಸಮಾಧಾನವಿಲ್ಲ. ಇವತ್ತು ಕೃಷಿ ಇಲಾಖೆಯಲ್ಲಿರುವ ಟೆಂಡರ್‌ಗಳು, ಇನ್ನು ಬೇಕಾದಷ್ಟು ಇದೆ, ಬೇರೆ ಸಂದರ್ಭದಲ್ಲಿ ಮಾತನಾಡುವಾಗ ಎಷ್ಟರ ಮಟ್ಟಿಗೆ ಖರ್ಚು ಮಾಡುತ್ತಿದ್ದಾರೆನ್ನುವುದನ್ನು ಹೇಳುತ್ತೇನೆ. ಬೇರೆ ಬೇರೆ ನಿದರ್ಶನಗಳಿವೆ ಒಂದೇ ಸಾರಿ ಹೇಳಿದರೆ ಸರಿ ಹೋಗುವುದಿಲ್ಲವೆನ್ನುವ ಕಾರಣಕ್ಕೆ ನಾಳೆ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ. ದಯಮಾಡಿ ಈ ರೀತಿಯಾಗಿರುವ ಟೆಂಡರ್‌ಗಳನ್ನು ಮೊದಲು ಕ್ಯಾನ್ಸಲ್ ಮಾಡಿ, there should be control on spending and authorize the Finance Department to over see all these issues. ಅದನ್ನು overall ಆಗಿ scrutinize ಮಾಡುವಂಥ ಅಧಿಕಾರವನ್ನು ಅವರಿಗೆ ಕೊಡಿ. Finance Secretary LOC ಕೊಡುವುದಕ್ಕೆ ಬರುವುದಿಲ್ಲ, ಎಷ್ಟು ಕೊಟ್ಟರೆಂದು ಅವರಿಗೆ ಗೊತ್ತಿರುವುದಿಲ್ಲ. ಹರಾಜಾಗುತ್ತದೆ, ಯಾರಿಗೂ ಗೊತ್ತಾಗುವುದಿಲ್ಲ. ಇದೆಲ್ಲಾ ಏನು? ಎಷ್ಟು ಸಾರಿ ಮಾತನಾಡಬೇಕು? ಎಷ್ಟು ಸಾರಿ ಮಾತನಾಡಿದರೂ ಪ್ರಯೋಜನವಾಗಿಲ್ಲ ದಯಮಾಡಿ ಇನ್ನು ಮುಂದೆ ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿ ಇದಕ್ಕೆ ನಮ್ಮದೇ ಆದ ವಿರೋಧವಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಪೂರಕ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ, ಇದೊಂದು ತರಹ ಮಿನಿ ಬಜೆಟ್ ಆಗಿದೆ. ಉದಾಹರಣೆಗೆ ಹೇಳುವುದಾದರೆ ಇವತ್ತು ಪೂರಕ ಬಜೆಟ್‌ನಲ್ಲಿ old-age pension ಕೊಡುವುದಕ್ಕೆ ಒಂದು ವರ್ಷವಾಗಿದೆ. ಕೆಲವು ಗ್ರಾಮೀಣ ಪ್ರದೇಶದ ಕಡೆ ಹೋದರೆ widow pension ಆಗಲಿ old-age pension ಆಗಲಿ ಒಂದು ವರ್ಷದಿಂದ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ, ಕಾರಣ, ಸರ್ಕಾರಕ್ಕೆ ತೊಂದರೆ ಏನಾದರೂ ಇದೆಯಾ? 21 ಸಾವಿರ ಕೋಟಿ ಸಾಲವಿದೆ, ಅದರ ಜೊತೆಗೆ ಇನ್ನು 500 ಕೋಟಿ ಸಾಲವಾದರೂ ಕೊಡಿ. ಏಕೆಂದರೆ, ಪೂರಕ ಬಜೆಟ್‌ನಲ್ಲಿ ಏನಾಗಿದೆ ಎಂದರೆ, ಪಶುಸಂಗೋಪನೆ ಇಲಾಖೆಯಲ್ಲಿ ಹಾಸನದಲ್ಲಿ ವೆಟರ್ನರಿ ಕಾಲೇಜ್ ಆಗಿ 4 ವರ್ಷವಾಯಿತು ಇವತ್ತಿನವರೆಗೆ ಬಿಲ್ಡಿಂಗ್ ಇಲ್ಲ. ಹಣಕಾಸು ಇಲಾಖೆಗೆ 3 ಸಾರಿ ಪ್ರಸ್ತಾವನೆ ಹೋದರೂ ಕೂಡ ಆ ಕಡತ ವಾಪಸ್ ಆಗುತ್ತದೆ. ಬೇಕಾಗಿದ್ದಕ್ಕೆ ಕೊಡುತ್ತಾರೆ, ಬೇಕಿಲ್ಲದ್ದಕ್ಕೆ ಕೊಡುವುದಿಲ್ಲ. ಏಕೆಂದರೆ, ನಾಳೆ ಆ ಕಾಲೇಜಿನಲ್ಲಿ ಓದುತ್ತಿರುವ ಹುಡುಗರ ಮಾನ್ಯತೆ ರದ್ದಾಗುವ

ಸನ್ನಿವೇಶ ಬರುತ್ತದೆ. ಇದಲ್ಲದೆ ರಸ್ತೆಗಳು, ಕುಡಿಯುವ ನೀರಿಗೆ ಇವತ್ತು ಪೂರಕ ಬಜೆಟ್‌ನಲ್ಲಿ ರೂ. 10 ಇಟ್ಟಿಲ್ಲ, ಕೆಲವು ಕಡೆ ಬರಗಾಲವಿದೆ, ಕುಡಿಯುವ ನೀರಿಗಾದರೂ 50 ಕೋಟಿ ರೂಪಾಯಿ ಇಟ್ಟಿದ್ದರೆ, ಎಲ್ಲಿ 123 ತಾಲ್ಲೂಕುಗಳನ್ನು ಬರಗಾಲ ಪೀಡಿತವೆಂದು ಡಿಕ್ಲೇರ್ ಮಾಡಿದ್ದೀರೋ, ಅದೆಲ್ಲಕ್ಕೂ ತಲಾ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಆ ಭಾಗದಲ್ಲಿ ಕುಡಿಯುವ ನೀರನ್ನು ಕೊಡಿಸುವ ಕಾರ್ಯಕ್ರಮವನ್ನಾದರೂ ಮಾಡಿಸಬಹುದಾಗಿತ್ತು. ಅದಕ್ಕೆ ಪೂರಕ ಬಜೆಟ್‌ನಲ್ಲಿ ಹಣ ಇಲ್ಲ. ಮಾನ್ಯ ಜಯಚಂದ್ರರವರು ಅಪೆಂಡಿಕ್ಸ್-ಇ ಬಗ್ಗೆ ಹೇಳಿದರು. ಫೆಬ್ರವರಿ ಆಗಿ ಇವತ್ತಿನವರೆಗೂ ಕೆಲಸ ಪ್ರಾರಂಭವಾಗಿಲ್ಲ. ಸುಮಾರು ಮೂರು ಸಾವಿರ ಕೋಟಿ, ನಾಲ್ಕು ಸಾವಿರ ಕೋಟಿ ಹಣ ಇಟ್ಟಿದ್ದಾರೆ. ಟೆಂಡರ್ ಕರೆಯುವುದು ಯಾವಾಗ, ಫೈನ್‌ಲೈಸ್ ಮಾಡುವುದು ಯಾವಾಗ ಕೆಲಸ ಮಾಡುವುದು ಯಾವಾಗ? ಏಕೆಂದರೆ ಹೋದ ಮಾರ್ಚ್ ಏಪ್ರಿಲ್‌ನಲ್ಲಿ ಅನುಮತಿ ತೆಗೆದುಕೊಂಡು, ಅಪೆಂಡಿಕ್ಸ್-ಇ ಅಪ್ರೂವಲ್ ಆಗಬೇಕಾದರೆ 10 ತಿಂಗಳು ಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ನಾವು ಕೆಲಸ ಮಾಡುವುದು ಯಾವಾಗ? ಹೋದ ಸಾರಿ 2010-11 ರಲ್ಲಿ ಅಪೆಂಡಿಕ್ಸ್-ಇ ಮಾರ್ಚ್ 15ನೇ ತಾರೀಕೋ ಏನೋ ಆಗಿರಬೇಕು. ಅದೂ Public Accounts Committee ಯಲ್ಲಿ ನಮ್ಮ ಜಯಚಂದ್ರರವರು ತರಿಸಿ ಮಾರ್ಚ್ 15ನೇ ತಾರೀಕು ಅನುಮತಿ ಕೊಡುವ ಸನ್ನಿವೇಶ ಬಂದಿದೆ. ಪೂರಕ ಬಜೆಟ್ ತರುವ ಬದಲು ವರ್ಷದಲ್ಲಿ ನಾಲ್ಕು ಸಾರಿ ಬಜೆಟ್ ಮಂಡನೆ ಮಾಡುವುದು ಒಳ್ಳೆಯದು. ಮೂರು - ಮೂರು ತಿಂಗಳಿಗೆ ಒಂದೊಂದು ಬಜೆಟ್ ಮಂಡನೆ ಮಾಡಿದರೆ ಅದಾದರೂ ಅನುಕೂಲವಾಗುತ್ತದೆ. ಎಲ್ಲಿ ಖರ್ಚಾಗುತ್ತದೆ ಯಾವುದರಲ್ಲಿ ಉಳಿಯುತ್ತದೆ ಎಂದು ಗೊತ್ತಾಗುತ್ತದೆ. ವರ್ಷದಲ್ಲಿ ಮೂರು ಸಾರಿ ಪೂರಕ ಬಜೆಟ್ ಮಂಡನೆ ಆದ ಹಾಗಾಗಿದೆ. ಯಾವುದು ನಿಗದಿತ ಕಾರ್ಯಕ್ರಮಗಳು ಬೇಕು ಅದಕ್ಕೆ ಅನುದಾನ ಇಲ್ಲ, ಆದ್ದರಿಂದ ದಯಮಾಡಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):- ಮಾನ್ಯ ಅಧ್ಯಕ್ಷರೆ, ಪೂರಕ ಬಜೆಟ್‌ನಲ್ಲಿ 6000 ಕೋಟಿ ಏನು ಪ್ರಸ್ತಾಪ ಮಾಡಿದ್ದಾರೆ ಕರ್ನಾಟಕ ರಾಜ್ಯದ ಬಜೆಟ್‌ನಲ್ಲಿ Vote on account ಆದ ಮೇಲೆ 85,000 ಕೋಟಿಗೂ ಅಧಿಕವಾದ ಬಜೆಟ್ ಮಂಡನೆ ಮಾಡಿದ್ದಾರೆ. ಮಂಡನೆ ಮಾಡಿ ಆದಮೇಲೆ Vote on account ಆದ ಮೇಲೆ ಆಯಾ ಇಲಾಖೆಗೆ ಏನು ಅನುದಾನ ಬರುತ್ತದೆ ಅದಕ್ಕನುಗುಣವಾಗಿ ಕೆಲಸ ನಿರ್ವಹಿಸತಕ್ಕಂತಹ ಸಂದರ್ಭದಲ್ಲಿ

ಇವತ್ತು ಮೂರು ಸಾರಿ ಪೂರಕ estimateಗೆ ಹೋಗುವುದಾದರೆ, ನಿಜವಾಗಿಯೂ ಮೊದಲು ಏನು ಆಯವ್ಯಯವನ್ನು ಮಂಡನೆ ಮಾಡಿರುತ್ತಾರೆ ಅದರ sanctity ಉಳಿಯುತ್ತಾ ಎನ್ನುವುದು ಮೂಲಭೂತವಾದ ಪ್ರಶ್ನೆ. ನಿಜವಾಗಿಯೂ ಹಣಕಾಸಿನ ಸ್ಥಿತಿಗತಿ ನಿರ್ವಹಣೆ ಮಾಡತಕ್ಕಂತಹ ಸಂದರ್ಭದಲ್ಲಿ ಇವತ್ತು ಏನು ವ್ಯತ್ಯಾಸಗಳಾಗುತ್ತವೆ, ನಾವೆಲ್ಲಾ ನೋಡಿದ್ದೇವೆ., ಒಂದು ರಾಜ್ಯದಲ್ಲಿ ಪೂರಕ ಬಜೆಟ್‌ಗೆ ಹೋಗತಕ್ಕಂತಹ ಸಂದರ್ಭ, estimate ಕೇಳತಕ್ಕಂತಹ ಸಂದರ್ಭ ಬರಗಾಲ ಬಂದಂತಹ ಸಂದರ್ಭದಲ್ಲಿ ನೆರೆ ಹಾವಳಿ ಬಂದಂತಹ ಸಂದರ್ಭದಲ್ಲಿ ಮತ್ತು ಒಂದು ಹೊಸ ಯೋಜನೆಯನ್ನು ರಾಜ್ಯದ ಮತ್ತು ರೈತರ ಹಿತದೃಷ್ಟಿಯಿಂದ ಒಂದು ಯೋಜನೆಯನ್ನು ಮಂಡನೆ ಮಾಡಿದಂತಹ ಸಂದರ್ಭದಲ್ಲಿ, ಆ ಯೋಜನೆ ಬಜೆಟ್‌ನಲ್ಲಿ ಸೇರದೆ ಇದ್ದಂತಹ ಸಂದರ್ಭದಲ್ಲಿ, ಆ ಯೋಜನೆಗೆ ಹಣ ಬೇಕಾದಂತಹ ಸಂದರ್ಭದಲ್ಲಿ ಪೂರಕ ಬಜೆಟ್‌ಗೆ ಒಪ್ಪತಕ್ಕಂಥದ್ದು ಸರ್ವೇ ಸಾಮಾನ್ಯವಾದ ವಿಚಾರ. ಆದರೆ ಇಲ್ಲಿ, ಆ ಇಲಾಖೆಗೆ ಕೊಟ್ಟಿರತಕ್ಕಂತಹ ಹಣ ಎಷ್ಟು ಖರ್ಚು ಮಾಡಿಲ್ಲ ಎನ್ನತಕ್ಕಂಥದ್ದನ್ನು ಹೇಳುತ್ತಾರೆ. ಅದಕ್ಕೋಸ್ಕರ adjustment ನಲ್ಲಿ ಈ ಪೂರಕ ಅಂದಾಜಿಗೆ ಹೋಗಬೇಕಾಗುತ್ತದೆ ಎನ್ನತಕ್ಕಂಥದ್ದು ಹೇಳುತ್ತೇನೆ. ನಾನು ಒಂದು ಉದಾಹರಣೆಗೆ ಹೇಳುತ್ತೇನೆ. ಕ್ರಿಶ್ಚಿಯನ್ ಸಮುದಾಯಕ್ಕೆ 50 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಮಂಡನೆ ಮಾಡಿದ್ದೀರಿ. ಆದರೆ ಅಲ್ಲಿ 4–5 ಕೋಟಿ ರೂ. ಮಾತ್ರ ಖರ್ಚಾಗಿದೆ. ಕಾರಣ ಏನು? ಅಲ್ಲಿರತಕ್ಕಂತಹ ಕೆಲವು ಕಂಡಿಷನ್ಸ್ ಏನಿದೆ ಅವುಗಳನ್ನು ತೆಗೆಯಬೇಕು. ಸಂಘ ರಚನೆ ಆಗಿ ಮೂರು ವರ್ಷಗಳಾಗಿರಬೇಕು, ಮೂರು ವರ್ಷಗಳ ನಂತರ ಅದರ ಆಡಿಟಿಂಗ್ ಆಗಬೇಕು, ಆ ಕಂಡಿಷನ್ಸ್ ನೋಡುತ್ತಿದ್ದ ಹಾಗೆ ಅವನು ಹೆದರಿ ಓಡಿ ಹೋಗುತ್ತಾನೆ. ಆ ಸಮುದಾಯ ಭವನವೂ ಬೇಡ, ಆ ದುಡ್ಡೂ ಬೇಡ ಎಂಬ ಭಾವನೆಯಿಂದ ಹೋಗುತ್ತಾನೆ. ಇಂತಹ ಅನೇಕ ಕಂಡಿಷನ್‌ಗಳನ್ನು ಹಾಕುವುದರಿಂದ ಕೆಲವೊಮ್ಮೆ ಹಣ ಖರ್ಚಾಗುವುದಿಲ್ಲ. ಈ ರೀತಿ ಹಣವನ್ನು ಖರ್ಚು ಮಾಡದೆ ಇದ್ದ ಸಂದರ್ಭದಲ್ಲಿ ಉಳಿದಂತಹ ಹಣವನ್ನು ಮಾರ್ಗಪಲ್ಲಟ ಮಾಡುವ ದೃಷ್ಟಿಯಿಂದ ಪೂರಕ ಬಜೆಟ್ ಅನ್ನು ಮಾಡತಕ್ಕಂಥದ್ದು ಅಲ್ಲ. ಮೂಲ ಅಂದಾಜಿನಲ್ಲಿರತಕ್ಕಂತಹ ಹಣ ಏತಕ್ಕೋಸ್ಕರ ಖರ್ಚಾಗಿಲ್ಲ? ಕಾರಣವೇನು? ಖರ್ಚು ಮಾಡಬೇಕು ಎನ್ನತಕ್ಕಂತಹ ಬದ್ಧತೆ ಸರ್ಕಾರಕ್ಕೆ ಇರಬೇಕು. ಸರ್ಕಾರದ ಸಚಿವರುಗಳಿಗೆ ಇರಬೇಕು. ನನ್ನ ಇಲಾಖೆಗೆ ಇಷ್ಟು ಹಣ ಬಂದಿದೆ, ಈ ಹಣ ಏತಕ್ಕೋಸ್ಕರ ಖರ್ಚಾಗಿಲ್ಲ ಎನ್ನತಕ್ಕಂಥದ್ದನ್ನು ನೋಡಿ ಪ್ರಾಮಾಣಿಕವಾಗಿ ಖರ್ಚು ಮಾಡುವ ಪ್ರಯತ್ನಗಳು ನಡೆದಾಗ ಬಹುಶಃ

ಈ ರೀತಿಯ ಸನ್ನಿವೇಶ ಬರುವುದಿಲ್ಲ. ಮತ್ತೊಂದು ಅಧಿಕವಾದ ಉತ್ಪತ್ತಿ ಹಾಗೂ ಟ್ಯಾಕ್ಸ್ ಬಂದಂತಹ ಸಂದರ್ಭದಲ್ಲಿ ಕೂಡ ಹಣ ಹೇಗೆ ಖರ್ಚು ಮಾಡುವುದು ಏನಾದರೂ ಮಾಡಿ ಬೇರೆ ಇಲಾಖೆಗಳಿಗೆ ಖರ್ಚು ಮಾಡುವುದಕ್ಕೋಸ್ಕರ ಬೇಡಿಕೆ ಇಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಹೋಗಬಹುದು. ಇಲ್ಲೇನು ಅಂತಹ ಸನ್ನಿವೇಶ ಕಂಡಿಲ್ಲ. ಟ್ಯಾಕ್ಸ್ ರೆವಿನ್ಯೂ ಹೆಚ್ಚುವರಿಯಾಗಿ ಬಂದಂತಹ ಸನ್ನಿವೇಶ ಕೂಡ ಇಲ್ಲ. ಆದರೆ ಇವತ್ತು ಈ ರೀತಿ ಒಂದಲ್ಲ ಎರಡಲ್ಲ ಮೂರು ಸಾರಿ ಯಾವುದೇ ಮಹತ್ತರವಾದ ಯೋಜನೆಗಳು ಇಲ್ಲದೆ, ರಾಜ್ಯಕ್ಕೆ ಅತೀ ಅವಶ್ಯಕವಾಗಿರತಕ್ಕಂಥದ್ದು 123 ತಾಲ್ಲೂಕುಗಳಲ್ಲಿ ಬರ ಬಂದಿದೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಬಡಿದುಕೊಳ್ಳುತ್ತಿದ್ದೇವೆ. ಶಾಸಕರ ಗೌರವದ ಪ್ರಶ್ನೆ ಇದೆ. ರಾಜ್ಯದ ಜನತೆಯ ಗೌರವದ ಪ್ರಶ್ನೆ ಇದೆ. ಕುಡಿಯುವುದಕ್ಕೆ ನೀರು ಕೊಡುತ್ತಿಲ್ಲವೆಂದು ಜನ ಪ್ರತಿಭಟನೆ ಮಾಡುತ್ತಿದ್ದಾರೆ. ಅದಕ್ಕೆ ಹಣವನ್ನು ತೊಡಗಿಸತಕ್ಕಂತಹ ದೃಷ್ಟಿಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. RDPR ಇಲಾಖೆಗೆ ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ, ಅದರಲ್ಲಿ ಯಾವ ಬಾಬತ್ತಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ RDPR ಇಲಾಖೆಗೆ ಕೊಟ್ಟಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವಂತಹ ಸಂದರ್ಭದಲ್ಲಿ ದಯಮಾಡಿ RDPR ಇಲಾಖೆಯಲ್ಲಿ ಬರ ಪ್ರದೇಶದ ಕುಡಿಯುವ ನೀರಿಗೋಸ್ಕರ ಇಷ್ಟು ಹಣವನ್ನು ತಾವು ದಯಮಾಡಿ ಒದಗಿಸಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿದರೆ ಬಹಳ ಸಂತೋಷಕರವಾದ ವಿಚಾರ ಆಗುತ್ತದೆ ಎನ್ನತಕ್ಕಂತಹ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ :- ಮಾನ್ಯ ಅಧ್ಯಕ್ಷರೆ, ಇವರೆಲ್ಲರೂ ಮಾತನಾಡಬೇಕಾದರೆ ಬರ ಇದ್ದಲ್ಲಿ ಕುಡಿಯುವ ನೀರಿಗೆ ಹಣ ಕೊಡಬೇಕೆಂದು ಹೇಳುತ್ತಾರೆ. ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ. ಆದರೆ ವಾಸ್ತವಿಕವಾಗಿ ನೀರಿನ ಸಮಸ್ಯೆ ಬರ ಇದ್ದಲ್ಲಿ ಮಾತ್ರ ಇದೆ ಎಂದು ದಯವಿಟ್ಟು ಈ ಸದನ ಭಾವಿಸಬಾರದು. ಕುಡಿಯುವ ನೀರಿನ ಸಮಸ್ಯೆ ಎಲಾ ಕಡೆ ಇದೆ. ಯಾವಾಗ ಮಾರ್ಚ್‌ಗಿಂತ ಮುಂಚೆ ಮಳೆ ಬರಬೇಕಾಗಿತ್ತು ಅದು ಬರಲಿಲ್ಲ, ಹಾಗಾಗಿ ಮಾತನಾಡುತ್ತಾ ಎಲ್ಲಾ ಕಡೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸೇರಿಸಿಕೊಂಡು ಮಾತನಾಡಿದರೆ ಒಳ್ಳೆಯದು ಎಂದು ಮಾನ್ಯ ಶಿವಲಿಂಗೇಗೌಡರಿಗೆ ಹೇಳುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಿಮಗೆ ಕಷ್ಟ ಇರುವುದು ನೀವು ಕೇಳಿಕೊಳ್ಳಿ. ನಮಗೆ ಕಷ್ಟ ಇರುವುದು ನಾವು ಕೇಳುತ್ತಿದ್ದೇವೆ. ನೀವು ಪೂರಕ ಬಜೆಟ್‌ಗೆ ಅನುಮೋದನೆ ಪಡೆಯುವುದಕ್ಕೆ ಇನ್ನು ಮೂರು ದಿವಸಗಳು ಇವೆ. ಅಷ್ಟು ಹಣ ಪಡೆಯುವುದಕ್ಕೆ ಮ್ಯಾಜಿಕ್ ಮಾಡಬೇಕಷ್ಟೆ. ಆ ದುಡ್ಡನ್ನು ಖರ್ಚು

ಮಾಡುವುದಕ್ಕಾಗುವುದಿಲ್ಲ. ಆದರೆ ಯಾವ್ಯಾವ ಮೂಲಕ್ಕೆ ಯಾವ್ಯಾವ ಬಿಲ್‌ಗೋಸ್ಕರ, ಯಾವ್ಯಾವ ಒಂದು ಕಮಿಟ್‌ಮೆಂಟ್‌ಗೋಸ್ಕರ ನೀವು ಕೇಳುತ್ತಿದ್ದೀರೋ ನಮಗೆ ಗೊತ್ತಿಲ್ಲ. ನೀವು ಮಾಡಿಕೊಳ್ಳಿ. ಪಾಪ ಸರ್ಕಾರ ನಡೆಸುವಾಗ ತಾಪತ್ರಯಗಳು ಇದ್ದದ್ದೇ. ಆದರೆ ಅಲ್ಲಿ ಒಂದು ಮಿತಿ ಇರುತ್ತದೆ. ಬರೀ ಟ್ರೆಜರಿಯಲ್ಲಿ ಬ್ಯಾಲೆನ್ಸ್ ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಇಲ್ಲಿ ಪೂರಕ ಬಜೆಟ್‌ಗೆ ಅನುಮೋದನೆ ಪಡೆದು ಅಲ್ಲಿ ಡ್ರಾಮ ಮಾಡಿದ ಹಾಗೆ PD accountಗೂ ಹಾಕಿದ ಹಾಗೆ ನಿಮ್ಮ ಹಣಕಾಸಿನ stability ಉತ್ತಮಪಡಿಸಿಕೊಳ್ಳುವುದಕ್ಕೋಸ್ಕರ ಈ ಪೂರಕ ಬಜೆಟ್ ಅನ್ನು ಅನುಮೋದನೆ ಪಡೆದು ಕೈಬಿಡಬೇಡಿ. ದಯವಿಟ್ಟು ಈ ಹಣವನ್ನು ಯಾವ್ಯಾವ ಮೂಲಕ್ಕೋಸ್ಕರ ಪಡೆಯುತ್ತೀರೋ, ಯಾವ್ಯಾವ ಹೊಸ ಕಾಮಗಾರಿಗಳನ್ನು ಕೊಡುವುದಾದರೆ, ಕೆಲವು ದೇವಸ್ಥಾನಗಳಿಗೆ ದುಡ್ಡು ಕೊಡುತ್ತೀರಿ, ನಮ್ಮ ಕ್ಷೇತ್ರದಲ್ಲಿಯೂ ದೇವರುಗಳಿವೆ ಅದನ್ನು ಮರೆಯಬೇಡಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಗ್ರಾಮೀಣ ರಸ್ತೆಗಳಿರುತ್ತವೆ, ಮಾನ್ಯ ಗೋವಿಂದ ಕಾರಜೋಳರವರು ಸಿಟ್ಟಾಗಬೇಕಾಗಿಲ್ಲ. ನಮಗೆ ಚೆಕ್ ಡ್ಯಾಮ್ ಎಂದು ಕೊಟ್ಟು ಒಂದಷ್ಟು ಗೌರವ ಉಳಿಸಿದ್ದೀರಿ. ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರನ್ನೂ ಅಭಿನಂದಿಸಬೇಕಾಗುತ್ತದೆ. ಅವರೂ ಒಂದಷ್ಟು ರೋಡ್ ಮಾಡಿ ಕೊಟ್ಟು ಗೌರವ ಉಳಿಸಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಅದೇ ರೀತಿ ಮಾನ್ಯ ಸೋಮಣ್ಣರವರು ಅಷ್ಟೆ. ಮನೆಗಳನ್ನು ಕೊಟ್ಟಿದ್ದಾರೆ. ಮನೆ ಕಟ್ಟುತ್ತೇವೋ ಬಿಡುತ್ತೇವೋ, ಒಟ್ಟಿನಲ್ಲಿ ಮನೆ ಅಂತೂ ಕೊಟ್ಟಿದ್ದಾರೆ. ಹಿಂದೆ ಇದ್ದ 60,000 ರೂ. ಗಳನ್ನು ವಾಪಸ್ ತೆಗೆದುಕೊಂಡು 75,000ರೂ. ಗೆ ಮಂಜೂರು ಮಾಡಿಕೊಡಿ. ಏಕೆಂದರೆ 60,000 ರೂ. ಗಳಿಗೆ ಯಾರೂ ಮನೆ ಕಟ್ಟುವುದಿಲ್ಲ. ನಿಮಗೂ ಅಭಿನಂದನೆ ಸಲ್ಲಿಸುತ್ತೇವೆ. ನೀವು ಏನು ಕೊಡುತ್ತೀರೋ ಅದನ್ನು ಹೇಳುತ್ತೇವೆ. ಎಲ್ಲವನ್ನೂ ಬರೀ ಟೀಕೆ ಮಾಡುವುದು ನಮ್ಮ ಕರ್ತವ್ಯವಲ್ಲ. ಒಳ್ಳೆಯ ಕೆಲಸ ಮಾಡಿದ್ದರೆ ಅದನ್ನೂ ಹೇಳಬೇಕಾಗುತ್ತದೆ. ಮಾನ್ಯ ಸದಾನಂದಗೌಡರು ಏನು ಬಜೆಟ್ ಮಂಡಿಸಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಿದ ಮೇಲೆ ಮಾತನಾಡೋಣ. ನಮ್ಮ ಕ್ಷೇತ್ರದಲ್ಲಿಯೂ ದೇವರುಗಳು ಇವೆ. ಎಲ್ಲಾ ಕ್ಷೇತ್ರದ ಶಾಸಕರ ದೇವರುಗಳಿಗೂ ಸ್ವಲ್ಪ ಕೊಡಿ. ನಮ್ಮಲ್ಲೂ ಮಠ ಮಾನ್ಯರಿದ್ದಾರೆ, ನಮಗೂ ಕೊಡಿ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಬರುವುದು ಬೇಡ.

ಶ್ರೀ ಸಿ.ಟಿ. ರವಿ :- ಮಾನ್ಯ ಶಿವಲಿಂಗೇಗೌಡರೆ, ಬೇರೆ ದೇವರನ್ನು ಹೊಗಳಿದರೆ, ಮನೆ ದೇವರಿಗೆ ಕೋಪ ಬರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನಾನು ಅದನ್ನು ಒಪ್ಪುವುದಿಲ್ಲ. ದೇವರು ಬೇರೆ ಬೇರೆ ಇಲ್ಲ. 'ದೇವರು' ಎಂದ ಮೇಲೆ, ಎಲ್ಲಾ ದೇವರೂ ಒಂದೇ. ಎಲ್ಲಾ ದೇವರುಗಳನ್ನೂ ಸಾಮೂಹಿಕವಾಗಿ ಒಳ್ಳೆಯ ರೀತಿಯಲ್ಲಿ ನೋಡಬೇಕು. ಅಲ್ಪಸಂಖ್ಯಾತರ ಬಗ್ಗೆ ಸ್ವಲ್ಪ ಈ ಸರ್ಕಾರಕ್ಕೆ ಕಾಳಜಿ ಇದೆ ಎನ್ನತಕ್ಕ ಭಾವನೆ ಬರಬೇಕಾದರೆ, ಅಲ್ಲಿಗೆ ತೊಡಗಿಸಿರತಕ್ಕಂಥ ಹಣವನ್ನು ಕೇವಲ ನಾಮಾಕಾವಸ್ತೆ ಸಲುವಾಗಿ ಇಟ್ಟು, ಅದು lapse ಆಯಿತು ಎಂದು ಹೇಳುವಂತಹ ಭಾವನೆ ತೋರಿಸಬೇಡಿ. ಕೆಲವೊಂದು ಕಂಡಿಷನ್ಸ್ ನೀವೇನು ಹಾಕಿದ್ದೀರೋ, ಅದನ್ನು ತೆಗೆದು ಹಾಕಿ. ಇಲ್ಲದಿದ್ದರೆ ಅವರಿಗೆ ಸಲ್ಲಬೇಕಾದ ಮೂಲಭೂತ ಸೌಕರ್ಯಗಳು ಸಲ್ಲುವುದಕ್ಕೆ ಸಾಧ್ಯವಿಲ್ಲ. ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು. ಆದರೆ ಇದು ಅನಿವಾರ್ಯ. ಈ ಪೂರಕ ಅಂದಾಜಿಗೆ ನಾವು ಅನುಮತಿ ಕೊಡುವುದಿಲ್ಲ ಎಂದರೆ, ನೀವೇನೂ ಬಿಡುವುದಿಲ್ಲ. ಅದಕ್ಕೆ ಅನುಮತಿ ಕೊಡುವುದು ಸದನಕ್ಕೆ ಅನಿವಾರ್ಯವಾಗುತ್ತದೆ. ಅನುಮತಿ ಕೊಡದಿದ್ದಲ್ಲಿ ದುಡ್ಡನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಸಹಮತವನ್ನೂ ವ್ಯಕ್ತಪಡಿಸುತ್ತಿದ್ದೇವೆ. ಈ ಆರು ಸಾವಿರ ಚಿಲ್ಲರೆ ಕೋಟಿ ರೂ.ಗಳ ಪೂರಕ ಅಂದಾಜುಗಳನ್ನೇನು ನೀವು ತಂದಿದ್ದೀರಿ, ಇದಕ್ಕೆ ಈ ಸದನ ಅನುಮತಿ ಕೊಡುತ್ತಿದೆ. ಮೂಲ ಬಜೆಟ್‌ನಲ್ಲಂತೂ ಬಹಳ ವ್ಯತ್ಯಾಸ ಮಾಡಿದ್ದೀರಿ. ಈ ಆರು ಸಾವಿರ ಕೋಟಿ ರೂ.ಗಳಲ್ಲಾದರೂ ಎಲ್ಲಾ ಶಾಸಕರಿಗೂ, ಎಲ್ಲಾ ಕ್ಷೇತ್ರಗಳಿಗೂ ಸಮಾನವಾಗಿ ಹಂಚಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಅಧ್ಯಕ್ಷರೆ, ಈಗ ತಾನೇ ನಮ್ಮ ಎಲ್ಲಾ ಹಿರಿಯ ನಾಯಕರು ಇದರ ಬಗ್ಗೆ ವ್ಯಾಖ್ಯಾನವನ್ನು ಮಾಡಿದ್ದಾರೆ. ನನ್ನದು ಒಂದೇ ಒಂದು ಆಕ್ಷೇಪ ಇದೆ. ಏನೆಂದರೆ, ಈ ಪೂರಕ ಅಂದಾಜಿನಲ್ಲಿ 6 ಸಾವಿರ ಕೋಟಿ ರೂ.ಗಳ ಮೂರನೇ ಕಂತನ್ನು ಸದನದ ಅನುಮೋದನೆಗೆ ನೀವು ಮಂಡಿಸಿದ್ದೀರಿ. ನನ್ನದೊಂದು un-starred question ಇತ್ತು. ಈ ವರ್ಷದ ಆಯವ್ಯಯದಲ್ಲಿ, ನಾನು non-plan ಕೇಳಿಲ್ಲ, planನಲ್ಲಿ ಯಾವ್ಯಾವ ಇಲಾಖೆಗೆ ಏನೇನು allocation ಮಾಡಿದ್ದೀರಿ, ಅದರಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೀರಿ? ಎಷ್ಟೆಷ್ಟು release ಆಗಿದೆ? ಎಂದು ನನ್ನ ಪ್ರಶ್ನೆ ಇತ್ತು. ಅದಕ್ಕೆ ಇವತ್ತು answer ಸಿಕ್ಕಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಅದನ್ನು ನೋಡಬೇಕು. ಅದರಲ್ಲಿರುವ figures ಸರಿ ಇದೆಯೋ, ಇಲ್ಲವೋ, ನನಗೆ ಗೊತ್ತಿಲ್ಲ. ಏಕೆಂದರೆ, ಅದರಲ್ಲಿ up-to January

end ಎಂದು ಕೊಟ್ಟಿದ್ದಾರೆ. ನಿಮಗೆ ಈಗಾಗಲೇ ನಾವು vote ಮಾಡಿರತಕ್ಕಂಥ ಬಜೆಟ್‌ನ plan allocation ನಲ್ಲಿ ಇವತ್ತು 34 ಸಾವಿರ ಕೋಟಿ ರೂ.ಗಳನ್ನು ಕೊಟ್ಟಿರುವುದರಲ್ಲಿ ನೀವು ಖರ್ಚು ಮಾಡಿದ್ದು ಎಷ್ಟಿದೆ ಎಂದರೆ, ಅದು ಕೇವಲ 19 ಸಾವಿರ ಕೋಟಿ ರೂ.ಗಳಾಗಿದೆ and not even 60% of the plan allocation. January end ವರೆಗೆ ನೀವು ಇವತ್ತೇ ನಮಗೆ ಕೊಟ್ಟಿರುವಂತಹ ಮಾಹಿತಿ ಪ್ರಕಾರ, ನಿಮಗೆ ನಾವು pass ಮಾಡಿರತಕ್ಕಂಥ ಬಜೆಟ್‌ನಲ್ಲಿ ನೀವು ಇನ್ನೂ 60% ಅನ್ನೂ ಕೂಡ ಖರ್ಚು ಮಾಡಿಲ್ಲ. ಇವತ್ತು 3ನೇ ಕಂತಿನ ಪೂರಕ ಅಂದಾಜುಗಳನ್ನು ತಂದಿದ್ದೀರಿ. ಇದು ಯಾವ ರೀತಿಯ financial management ಎಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, prudent financial management ಎಂದರೆ, ಒಂದು ಸಾರಿ ನಾವು ಏನು ಸದನದಲ್ಲಿ ಬಜೆಟ್ ಅನ್ನು ಮಂಡಿಸುತ್ತೇವೋ, we have to stick on to our original estimates. ಅದರ ಆಚೆ, ಈಚೆ ಹೋದರೆ ಇವತ್ತು ಸರಿ ಹೋಗುವುದಿಲ್ಲ. ಅಲ್ಲಿ ಇರತಕ್ಕಂಥ mandateಗೆ ನೀವು ಖರ್ಚು ಮಾಡದೆ, ಮತ್ತೆ additional ಆಗಿ ತರುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ clarification ಕೊಡಬೇಕು. ಏಕೆಂದರೆ, ನೀವು ಜನವರಿ end ವರೆಗೆ ಹೇಳಿದ್ದೀರಿ. ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಎಷ್ಟು ಖರ್ಚು ಮಾಡುತ್ತೀರೋ, ಗೊತ್ತಿಲ್ಲ. ನೀವು 55% ನಷ್ಟು ಪೂರ್ತಿ ಇಡೀ ವರ್ಷದ 10 ತಿಂಗಳಿನಲ್ಲಿ ಖರ್ಚು ಮಾಡಿ, ಇನ್ನುಳಿದ ಎರಡೇ ತಿಂಗಳಿನಲ್ಲಿ ಉಳಿದ ಹಣವನ್ನೆಲ್ಲಾ ಖರ್ಚು ಮಾಡುತ್ತೀರಿ ಎನ್ನುವುದಾದರೆ, ಖಂಡಿತವಾಗಿಯೂ ಅದರಲ್ಲಿ ಅವ್ಯವಹಾರವಾಗುತ್ತದೆ. February and March ನಲ್ಲೇ ನಾವು ಎಲ್ಲಾ ಹಣವನ್ನೂ ಖರ್ಚು ಮಾಡುತ್ತೇವೆ ಎಂದು ನೀವು ಹೇಳುವುದಾದರೆ, ನಾನಂತೂ ಖಂಡಿತವಾಗಿಯೂ ಅದನ್ನು ನಂಬುವುದಿಲ್ಲ. ಏಕೆಂದರೆ, most of the bills will be fabricated bills. ನಾನು ಈ ಮಾತನ್ನು ಕಳೆದ ಸಾರಿ ಕೂಡ ಹೇಳಿದ್ದೇನೆ. ನೀವು quarterly releases ಮಾಡುತ್ತೀರಿ. ನೀವು quarterly releases ಮಾಡುವಾಗ, ನಿಮ್ಮ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಏನು ಕೆಲಸ ಮಾಡುತ್ತಾರೆ? Why they are not reviewing? ಆ Quarterly release ಮಾಡಿರತಕ್ಕಂಥ ಹಣವನ್ನಾದರೂ ಖರ್ಚು ಮಾಡಿದ್ದರೆ, this situation wouldn't have arisen. This is happening every time. ಮಾನ್ಯ ಮುಖ್ಯಮಂತ್ರಿಗಳೇ Finance Minister ಆಗಿರುವುದರಿಂದ, ಈ ಪದ್ಧತಿಯನ್ನು

ಒಂದು ವೇಳೆ ನಾವು ಕೈಬಿಡದಿದ್ದರೆ, ನಮ್ಮ ರಾಜ್ಯಕ್ಕೆ ಇದೊಂದು ಕೆಟ್ಟ ಹೆಸರು ಬರುತ್ತದೆ. ನಮ್ಮ ರಾಜ್ಯದ ಜನರಿಗೆ ಏನೊಂದು ಅಭಿವೃದ್ಧಿಯಾಗಬೇಕಾಗಿದೆ, ಅದರಲ್ಲಿ ಕುಂಠಿತವಾಗುತ್ತದೆ. ನಾವು ನಮ್ಮ plan size has grown to Rs. 34,000 crores ಎಂದು ಖುಷಿ ಪಟ್ಟರೂ ಕೂಡ, ಇವತ್ತು ultimately expenditure ಆಗುತ್ತಿರುವುದು ಕಡಿಮೆಯಾಗಿದೆ. ಈಗ 19 ಸಾವಿರ ಕೋಟಿ ರೂ.ಗಳ ವೆಚ್ಚವಾಗಿದೆ, ಇನ್ನೊಂದು 5–6 ಸಾವಿರ ಕೋಟಿ ರೂ.ಗಳ expenditure ಆಗಬಹುದು. ಅಂದರೆ, plan Head of Acccount ನಲ್ಲಿ 25% expenditure ಆಗಿಲ್ಲ ಎನ್ನುವುದಾದರೆ, it is not good for the state. ಇದಕ್ಕೆ ಇತಿಶ್ರೀ ಹಾಡತಕ್ಕಂಥ ಮಾರ್ಗವೊಂದನ್ನು ಏನಾದರೂ ತಾವು ಹುಡುಕಬೇಕು. ಇದರಲ್ಲಿ ಕೆಲವೊಂದು specific works ಗೆ ನೀವು ಕೊಟ್ಟಿದ್ದೀರಿ. ಅದಕ್ಕೆ ನನ್ನದೇನೂ ಆಕ್ಷೇಪವಿಲ್ಲ. ಏಕೆಂದರೆ, ಯಾವುದೋ ಒಬ್ಬ ಮಿನಿಸ್ಟರ್‌ಗೆ, ಒಬ್ಬ ಶಾಸಕರಿಗೆ ನೀವು ಓಲೈಸುವುದಕ್ಕೆ ನೀವು ಈ ರೀತಿಯಾಗಿ ಹಣ ಕೊಟ್ಟರೆ, ನಮ್ಮದೇನೂ ಅಭ್ಯಂತರವಿಲ್ಲ. if there is any emergency in that constituency. ನಮ್ಮ constituency ನಲ್ಲಿ ಬೇರೆ constituency ಯಲ್ಲಿ ಏನಾದರೂ emergency ಇದ್ದರೆ, ಅದಕ್ಕೆ ನೀವು ಹಣ ಕೊಡಿ. ಆದರೆ just, politically motivated ಆಗಿ, ನೀವು ಹಣ ಕೊಟ್ಟರೆ, I don't know what is the constraint ಆ ರೀತಿ ಆದರೆ, ಇದು ಇವತ್ತು it is not a prudent financial management ಎಂದು ನನಗನಿಸುತ್ತದೆ. ಈ ರೀತಿ ಮುಂದೆ ಆಗಬಾರದು. ಈಗೇನು ಮಾಡಿದ್ದೀರೋ, ಅದಕ್ಕೆ I don't know what was your political constraint. I don't what to go into that. But in future it should not happen like that and regular expenditure ಕೂಡ ಕ್ರಮಬದ್ಧವಾಗಿರಬೇಕೆನ್ನುವುದು ನನ್ನ ಮನವಿಯಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು, ಉಪನಾಯಕರು, ಸನ್ಮಾನ್ಯ ರೇವಣ್ಣನವರು, ಮಾನ್ಯ ಶಿವಲಿಂಗೇಗೌಡರು ಮತ್ತು ಮಾನ್ಯ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ಎಲ್ಲರಿಂದಲೂ ಎಲ್ಲಾ ಕಡೆಗಳಲ್ಲಿಯೂ ಒಂದಷ್ಟು financial *indiscipline* ಇದೆ ಎಂದು ಪ್ರಸ್ತಾಪವಾಗಿದೆ. 'ಮೂರು ಕಂತುಗಳನ್ನು ಬೇರೆ ಬೇರೆ ಹಂತಗಳಲ್ಲಿ ತೆಗೆದುಕೊಳ್ಳುವಂತಹ ಅವಶ್ಯಕತೆ ಇರಲಿಲ್ಲ. ನೀವು ಸರಿಯಾಗಿ ಬಜೆಟ್‌ನಲ್ಲಿ ನಿಮ್ಮ ಬೇಡಿಕೆಗಳನ್ನು ನಮೂದು ಮಾಡಿದ್ದರೆ, ಈ

ಪೂರಕ ಅಂದಾಜುಗಳನ್ನು ಬೇರೆ ಬೇರೆ ಹಂತಗಳಲ್ಲಿ ಮಂಡಿಸುವಂತಹ ಅವಶ್ಯಕತೆ ಇರಲಿಲ್ಲ' ಎನ್ನುವಂತಹ ಮಾತುಗಳನ್ನು ಎಲ್ಲರೂ ಉಲ್ಲೇಖ ಮಾಡಿದ್ದಾರೆ. ನಾನು ಪ್ರಾರಂಭದಲ್ಲಿ ಮಾನ್ಯ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಹೇಳಿದ ಮಾತುಗಳಿಗೆ ಉತ್ತರ ನೀಡಲಿಕ್ಕೆ ಇಚ್ಛೆ ಪಡುತ್ತೇನೆ. ನೀವು ಹೇಳಿರುವಂಥದ್ದು ಸರಿಯಿದೆ. ಜನವರಿ ತಿಂಗಳ ಅಂತ್ಯಕ್ಕೆ 56.93 ಶೇಕಡಾವಾರು ವೆಚ್ಚವಾಗಿದೆ. ಅಂದರೆ ಅಂದಾಜು ಆಯವ್ಯಯ ಸುಮಾರು 34,644 ಕೋಟಿ ರೂ.ಗಳಿದ್ದರೆ, ಅದರಲ್ಲಿ 19,724 ಕೋಟಿ ರೂ.ಗಳ ವೆಚ್ಚವಾಗಿದೆ. ಇದು AG report ಪ್ರಕಾರ ಆಗಿರುವಂಥದ್ದಾಗಿದೆ. ಕಳೆದ 2009–10, 2010–11, 2011–12ರ ಜನವರಿ ಅಂತ್ಯಕ್ಕೆ ಕೂಡ ಅದೇ ರೀತಿ ಇರುವುದನ್ನು ನೀವು ನೋಡಿದ್ದೀರಿ ಎಂದು ನಾನು ಭಾವಿಸುತ್ತೇನೆ. 2009–10ಕ್ಕೆ plan size 24,516 ಕೋಟಿ ರೂ. ಗಳಾಗಿತ್ತು. ಅದರಲ್ಲಿ 14,211 ಕೋಟಿ ರೂ.ಗಳು ಖರ್ಚಾಗಿತ್ತು. ಆಗ ಕೂಡ ಶೇಕಡ ವೆಚ್ಚ 57.97% ಆಗಿತ್ತು. 2010–11ರಲ್ಲಿ ಅದೇ ಜನವರಿ ಅಂತ್ಯಕ್ಕೆ 27,098 ಕೋಟಿ ರೂ.ಗಳ ಅಂದಾಜು ಆಯವ್ಯಯದಲ್ಲಿ 16,885 ಕೋಟಿ ರೂ.ಗಳು ಖರ್ಚಾಗಿತ್ತು. ಆಗ ಕೂಡ 62% ಮಾತ್ರ ಖರ್ಚಾಗಿತ್ತು ಆದರೆ, ಕೊನೆಯ ಹಂತದಲ್ಲಿ ಎಲ್ಲವನ್ನೂ ಖರ್ಚು ಮಾಡಿದೆವು. 2009–10ರಲ್ಲಿ ಅಂತ್ಯದಲ್ಲಿ ಒಟ್ಟು 99.27% ಆಗಿದೆ. 2010–11ರಲ್ಲಿ 108% ರಷ್ಟು ಖರ್ಚಾಗಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಸಾಧಾರಣವಾಗಿ ಜನವರಿ ತಿಂಗಳ ನಂತರವೇ ಬಾಕಿ ಬಿಲ್ಲುಗಳು ಮತ್ತು ಇತರ ಎಲ್ಲಾ ಹೆಚ್ಚಿನ payment ಆಗುವಂಥದ್ದು ಆಗಿವೆ. 'ತಾವು ಕೇವಲ ಇಷ್ಟನ್ನೇ ಖರ್ಚು ಮಾಡಿದ್ದೀರಿ, ಇನ್ನು ಎರಡೇ ತಿಂಗಳಿನಲ್ಲಿ ಎಲ್ಲವನ್ನೂ ಖರ್ಚು ಮಾಡಲು ಹೇಗೆ ಆಗುತ್ತದೆ? ಎಂದು ಕೇಳುತ್ತಿದ್ದೀರಿ. ಅದಕ್ಕೆ ಹಿಂದಿನ ವರ್ಷಗಳ ಉದಾಹರಣೆ ಇದೆ. ಅದೇ ರೀತಿಯಲ್ಲಿ ಇವತ್ತೂ ಕೂಡ ನಡೆಯುತ್ತದೆ. ಆದಕಾರಣ, ತಮ್ಮಲ್ಲಿ ಏನೊಂದು ಸಣ್ಣ ತಪ್ಪು ಕಲ್ಪನೆ ಇದೆಯೋ, ಅದು ಸರಿಯಲ್ಲ. ಈ ರೀತಿಯಾಗಿ financial year ಕೊನೆಯಲ್ಲಿ ಆಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ವಿಶೇಷವಾಗಿ, ಮಾನ್ಯ ಶಿವಲಿಂಗೇಗೌಡರು ಇನ್ನೊಂದು ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರು. 'ಸುಮ್ಮನೆ Supplementary Budget ಏಕೆ ತರುತ್ತೀರಿ? ಹಿಂದೆಯೇ ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಬೇಕಿತ್ತು ಎನ್ನುವುದನ್ನು ಅಂದಾಜು ಮಾಡಬೇಕಿತ್ತು' ಎಂದು ಅವರು ಹೇಳಿದರು. ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಉಪ ನಾಯಕರಿಗೆ ಹಿಂದಿನ ಅಂಕಿ–ಅಂಶಗಳನ್ನು

ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಹಿಂದೆ ಹೇಗೆ ಆಗುತ್ತಿತ್ತು? ಹೇಗೆ 2004–2005 ರಿಂದ 2011–12 ರವರೆಗೆ Supplementary Budget ನಲ್ಲಿ ಯಾರ್‍ಯಾರು ಎಷ್ಟೆಷ್ಟು ತೆಗೆದುಕೊಂಡಿದ್ದರು? ಅದರಲ್ಲಿ ಆಯವ್ಯಯದ ಗಾತ್ರಕ್ಕೆ ಪೂರಕ ಅಂದಾಜುಗಳ percentage ಎಷ್ಟೆಷ್ಟು ಇತ್ತು ಎನ್ನುವುದನ್ನು ಸದನದ ಮುಂದೆ clarify ಮಾಡಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. 2004–05 ರಲ್ಲಿ ಆಯವ್ಯಯದ ಗಾತ್ರ 23,922 ಕೋಟಿ ರೂ. ಗಳಾಗಿತ್ತು. ಒಟ್ಟು ಪೂರಕ ಅಂದಾಜುಗಳ ಮೊತ್ತ 2,388 ಕೋಟಿ ರೂ. ಗಳು ಅಂದರೆ ಆಯವ್ಯಯದ ಶೇಕಡ 10ರಷ್ಟು ಇತ್ತು. 2005–06 ರಲ್ಲಿ ಆಯವ್ಯಯದ ಗಾತ್ರ 32,163 ಕೋಟಿ ರೂ.ಗಳಾಗಿತ್ತು. ಒಟ್ಟು ಪೂರಕ ಅಂದಾಜುಗಳ ಮೊತ್ತ 4,365 ಕೋಟಿ ರೂ.ಗಳಾಗಿತ್ತು. ಆ ಪೂರಕ ಅಂದಾಜುಗಳು ಆಯವ್ಯಯದ ಗಾತ್ರದ ಶೇ. 12 ಆಗಿತ್ತು. 2006–07 ರಲ್ಲಿ ಆಯವ್ಯಯದ ಗಾತ್ರ 45,099 ಕೋಟಿ ರೂ. ಗಳಾಗಿತ್ತು. ಆ ವರ್ಷ ಪೂರಕ ಅಂದಾಜುಗಳ ಮೊತ್ತ 7,393 ಕೋಟಿ ರೂ.ಗಳಾಗಿತ್ತು. ಅದು ಆಯವ್ಯಯದ ಗಾತ್ರದ ಶೇ.16 ಆಗಿತ್ತು. ಈ ಪೂರಕ ಅಂದಾಜುಗಳನ್ನು ಕೇವಲ ಈ ವರ್ಷ ಮಾತ್ರವೇ ಪ್ರಸ್ತಾಪ ಮಾಡಿಲ್ಲ. ಹಿಂದಿನ ವರ್ಷಗಳಲ್ಲೂ ಸಹ ಮಾಡಿದ್ದಾರೆ. ಸಣ್ಣ ಪುಟ್ಟ financial indiscipline ಬಗ್ಗೆ ತಾವು ಎತ್ತಿ ತೋರಿಸಿದ್ದೀರಿ. ಅದನ್ನು ಇಲ್ಲವೆಂದು ಹೇಳುವುದಿಲ್ಲ. ಸತ್ಯ ಸಂಗತಿಗಳನ್ನು ನಾನು ಖಂಡಿತವಾಗಿಯೂ ಸ್ವೀಕಾರ ಮಾಡುತ್ತೇನೆ. ಅದರಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. 2007–08 ರಲ್ಲಿ ಪೂರಕ ಅಂದಾಜುಗಳು, ಆಯವ್ಯಯ ಗಾತ್ರದ ಶೇ.10 ಆಗಿತ್ತು. 2009–10 ರಲ್ಲಿ ಆಯವ್ಯಯದ ಗಾತ್ರ 64,421 ಕೋಟಿ ರೂ.ಗಳಾಗಿತ್ತು. ಆ ವರ್ಷ ಪೂರಕ ಅಂದಾಜುಗಳ ಮೊತ್ತ 11,998 ಕೋಟಿ ರೂ.ಗಳಾಗಿತ್ತು. ಅದು ಆಯವ್ಯಯದ ಗಾತ್ರದ ಶೇ. 18 ಆಗಿತ್ತು. 2010–11ರಲ್ಲಿ ಆಯವ್ಯಯದ ಗಾತ್ರ 72,059 ಕೋಟಿ ರೂ.ಗಳಾಗಿತ್ತು. ಆ ವರ್ಷ ಪೂರಕ ಅಂದಾಜುಗಳ ಮೊತ್ತ 13,134 ಕೋಟಿ ರೂ.ಗಳಾಗಿತ್ತು. ಅದು ಆಯವ್ಯಯದ ಗಾತ್ರದ ಶೇ. 18 ಆಗಿತ್ತು. 2010–11ರಲ್ಲಿ ರೂ.72,059 ಕೋಟಿ ಆಯವ್ಯಯ ಗಾತ್ರ ಇದ್ದು, ರೂ. 13,134 ಕೋಟಿ ಎಂದರೆ 18 %. ಆ ಪೂರಕ ಅಂದಾಜಿನಲ್ಲಿ adjustment ಮಾಡುವ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಲಾಗಿದೆ. 2011–12 ರಲ್ಲಿ ರೂ. 87,737 ಕೋಟಿ ಆಯವ್ಯಯ ಗಾತ್ರವಿದ್ದು, ರೂ. 12,008 ಕೋಟಿ ಎಂದರೆ ಇದರಲ್ಲಿ ಮೊದಲ ಪಾಲು ಮತ್ತು ಎರಡನೇ ಪಾಲು ಎಲ್ಲಾ ಸೇರಿ ಸುಮಾರು 14 % ಮಾತ್ರ ಆಗುತ್ತದೆ. ಈ ಪೂರಕ ಅಂದಾಜುಗಳನ್ನು ವರ್ಷೇವರ್ಷೇ ವ್ಯತ್ಯಾಸ ಮಾಡಿದ್ದು, ಕಳೆದ ಎರಡು ವರ್ಷ ಮತ್ತು ಈ ವರ್ಷಕ್ಕೆ ಹೋಲಿಸಿದರೆ ನಾವು ಸಾಕಷ್ಟು

streamline ಮಾಡುವ ಕೆಲಸ ಕಾರ್ಯಗಳಲ್ಲಿ ಯಶಸ್ವಿಯಾಗಿದ್ದೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಏಕೆ ಈ ರೀತಿ adjustment ಗಳನ್ನು ಮಾಡುತ್ತಿದ್ದೇವೆ? ತಾವು unspent money ಎಂದು ಹೇಳಿದಿರಿ. ಯಾವುದಕ್ಕೆ ನಾವು provision ಮಾಡಿ ಅದಕ್ಕೆ approval ತೆಗೆದುಕೊಂಡು ಅದಕ್ಕೆ ಖರ್ಚಾಗದಿದ್ದರೆ ಅದು unspent money, ಸರಿ ತಾನೇ? ಒಂದು ಕೆಲಸಕ್ಕೆ approval ತೆಗೆದುಕೊಂಡು, ಅದಕ್ಕೆ utilization ಮಾಡದಿದ್ದರೆ, ಅದು unspent money ಆಗಿ ಉಳಿಯುವುದನ್ನು ನಾವು ಕಂಡಿದ್ದೇವೆ. ಈಗ ಈ savingsನಲ್ಲಿ ಬೇರೆ ಎಲ್ಲಿ excess expenditure ಆಗುತ್ತದೆ ಎಂದು ಹೇಳುವುದನ್ನು ನೋಡಿದಾಗ re-adjustment ಮಾಡುವಂತಹ ಕೆಲಸ ಕಾರ್ಯಗಳನ್ನು ಮಾತ್ರ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಪ್ರತಿ ಹಂತದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. IP setಗಳಿಗೆ ವಿದ್ಯುತ್ ಪೂರೈಕೆಗಾಗಿ ಸಹಾಯಧನ ಕೊಡಬೇಕು. ಒಂದಷ್ಟು variation ಮತ್ತೊಂದು ಆಗುವುದನ್ನು ನಾವು ನೋಡುತ್ತಿದ್ದೇವೆ. KERC ordre ಇದೆ. ESCOM ಗಳಿಗೆ ನಾವು ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದುದರಿಂದ ಇದಕ್ಕೆ ಹೆಚ್ಚು ಬಂದಿದ್ದನ್ನು ಪೂರಕ ಬಜೆಟ್‌ನಲ್ಲಿ ನಾವು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಿದ್ದೇವೆ. ಅದಕ್ಕಾಗಿ 700 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಇದು ಬಾಕಿ ವಿಚಾರಕ್ಕೆ ಎಂದು ಅಲ್ಲ. ಉದಾಹರಣೆಗೆ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ payment ಮಾಡುವುದಕ್ಕೆ bills ready ಇದೆ. ನಾವು ಬಿಲ್ಸ್ ಕೊಡಬೇಕಾಗಿದೆ. ಸುಮಾರು 580 ಕೋಟಿ ರೂಪಾಯಿ ಜಾಸ್ತಿ ಖರ್ಚಾಗಿದೆ. ಮೊದಲು ನಾವು ಏನು allotment ಮಾಡಿದ್ದೇವೆ ಅದು ಸ್ವಲ್ಪ ಕಡಿಮೆಯಾಗಿದೆ. So, I am forced to have an adjustment with this. ಇದೇ ರೀತಿ ನಾನು ಬೇರೆ ಬೇರೆ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲವನ್ನೂ ಹೇಳಬಹುದು. ಗ್ರಾಮೀಣ ಸಂಪರ್ಕ, ಇದೆಲ್ಲಾ institution ಗೆ ಹೋಗಿ credit ಆಗುತ್ತದೆ. ಅದಕ್ಕೆ ಬೇಕಾದಂತಹ 382 ಕೋಟಿ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಬಳಕೆಗೆ ಹೂಡಿಕೆಯನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ಹೊರಗಡೆ ಸ್ವಲ್ಪ ಸಾಲ ತೆಗೆದುಕೊಂಡು ವಿದ್ಯುತ್‌ನಲ್ಲಿ ಹೆಚ್ಚು ಹೂಡಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ನಾವು ಎಲ್ಲೆಲ್ಲಿ adjust ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ, ಇದೆಲ್ಲವೂ ಕೂಡ ಪೂರಕ ಅಂದಾಜಿನಲ್ಲಿ ಬರುತ್ತದೆ. ಸುವರ್ಣ ಗ್ರಾಮಕ್ಕಾಗಿ

ನಾವು 200 ಕೋಟಿ ರೂಪಾಯಿಗಳನ್ನು ನಾವು ಹೆಚ್ಚು ಕೇಳಿದ್ದೇವೆ. 400 ಕೋಟಿ ರೂಪಾಯಿ ಆಯಿತು. ಈಗ ಎಲ್ಲಾ ಕೆಲಸ ಕಾರ್ಯಗಳಾಗಿವೆ. ಸುವರ್ಣ ಗ್ರಾಮಕ್ಕೆ ನಾವು payment ಮಾಡುವಂಥಾದ್ದು ಮಾಡುತ್ತಿದ್ದೇವೆ. ಆದಕಾರಣ ಈ ಐಟಂಗಳಲ್ಲಿ ತೋರಿಸಿದಂತಹ ಎಲ್ಲವೂ ಕೂಡ with in the financial limits ಮತ್ತು necessities ಅನುಗುಣವಾಗಿ ಬೇಡಿಕೆಗಳನ್ನು ಮುಂದಿಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇವೆಲ್ಲ ಮೊತ್ತಗಳನ್ನು ಮುಂದಿನ ಎರಡು ಮೂರು ದಿನಗಳಲ್ಲಿ ಎಂದರೆ ಕೊನೇ ದಿನಗಳಲ್ಲಿ ಮಾಡಿದರೆ ಬಾರೀ ಆತಂಕ. ಅದು ಹಾದಿ ತಪ್ಪುವಂತಹ ಸಂದರ್ಭಗಳು ಆಗುತ್ತದೆ. ಅಂಥಾದ್ದು ಆಗದ ಹಾಗೆ ನೋಡಿಕೊಳ್ಳುವಂತಹ ಜವಾಬ್ದಾರಿ ಕೂಡ ನಮ್ಮದು ಇದೆ. ಅದಕ್ಕೆ ಬೇಕಾಗಿಯೇ ಪೂರಕವಾದ ಬಜೆಟ್‌ನ ವಿಸ್ತಾರವಾದಂತಹ ವ್ಯವಸ್ಥೆಗಳನ್ನು ಹೇಳಿಕೊಂಡು ಮಾಡಿದ್ದೇವೆ. ನೀವು KSFC ಬಗ್ಗೆ ಉಲ್ಲೇಖ ಮಾಡಿದಿರಿ. ಕಳೆದ ಬಾರಿ OTS ಇತ್ತು. ದಿನಾಂಕ 31.03.2011 ರವರೆಗೆ provision ಮಾಡಿಕೊಳ್ಳಲಾಗಿತ್ತು. ಆಮೇಲೆ ಏನಾಯಿತು? ಆಮೇಲೆ ನಾವೆಲ್ಲ ಸೇರಿ scheme extend ಮಾಡಿದೆವು. So automatically ಅದಕ್ಕೆ adjustment ಮಾಡಬೇಕೆಂದರೆ ನಾವು ಒಂದು ಸ್ವಲ್ಪ ಹಣವನ್ನು ತೆಗೆದುಕೊಳ್ಳಬೇಕಾದಂತಹ ಅನಿವಾರ್ಯತೆ ಇರುತ್ತದೆ. ಈ ರೀತಿ ಎಲ್ಲೆಲ್ಲಿ necessity ಇದೆ ಅಂತಹ ಕಡೆ ಮಾಡುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ನಾನು ಸದನದ ಮುಂದೆ ಏನು ಮಂಡನೆ ಮಾಡಿದ್ದೇನೆ, ಈ ಒಂದು ಪೂರಕ ಅಂದಾಜನ್ನು "ದಿನಾಂಕ : 31.03.2012 ರಂದು ಕೊನೆಗೊಳ್ಳುವಂತ ಆರ್ಥಿಕ ವರ್ಷದಲ್ಲಿ ಬರುವಂತಹ ಅಭಿಯಾಚನೆಗಳ ಕ್ರಮಾಂಕ 1 ರಿಂದ 24 ಮತ್ತು 26 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಶ್ರೀ ಸಿದ್ದರಾಮಯ್ಯ :- ನಾನು ನಿಮಗೆ ಹೇಳಿದೆನಲ್ಲ ಈ ಬಜೆಟ್ ಪುಸ್ತಕದಲ್ಲಿ ಏನೆಂದು ನನಗೆ clarify ಆಗುತ್ತಿಲ್ಲ. ನೀವು ಹೇಳಲಿಲ್ಲ. ರೂ. 83,728 ಕೋಟಿ ಬಜೆಟ್ ಅಂದಾಜುಗಳು ಎಂದು ಇಟ್ಟುಕೊಂಡಿದ್ದೀರಿ. ಮತ್ತೆ revised estimates ನಲ್ಲಿ ರೂ. 78,439 ಕೋಟಿ ರೂಪಾಯಿ ಎಂದು ಇಟ್ಟುಕೊಂಡಿದ್ದೀರಿ. ಅದರಲ್ಲಿ ಮತ್ತೆ ವೆಚ್ಚ ಎಂದರೆ ಖರ್ಚು ಮಾಡಿರುವುದು

ಎಸ್ಟಿಮೇಟ್ 85,318 ಕೋಟಿ ರೂಪಾಯಿಯಿದ್ದರೆ, ಅದರಲ್ಲಿ revised estimates 84,334 ಕೋಟಿ ರೂಪಾಯಿ ಇದೆ. ಇದು ಒಂದಕ್ಕೊಂದು ತಾಳೆ ಇಲ್ಲವಲ್ಲ.

ಶ್ರೀ ಡಿ.ವಿ. ಸದಾನಂದಗೌಡ :- ಅದು ಸ್ವಲ್ಪ ಅದಲುಬದಲಾಗಿದೆ. ಜಮೆಗಳು ಈ ಭಾಗದಲ್ಲಿ ಬಂದಿದೆ, ವೆಚ್ಚಗಳು ಈ ಭಾಗದಲ್ಲಿ ಬಂದಿದೆ.

ಶ್ರೀ ಸಿದ್ದರಾಮಯ್ಯ :- ಹಾಗೆ ಓದಿಕೊಳ್ಳಬೇಕಾ?

ಶ್ರೀ ಡಿ.ವಿ. ಸದಾನಂದಗೌಡ :- ಜಮೆಗಳು ಬಲ ಬದಿಯಲ್ಲಿ ಬಂದಿದೆ, ಎಡ ಬದಿಯಲ್ಲಿ ಅದು ಬಂದಿದೆ. ಒಂದು ಸಂಗತಿ ಏನಾಗಿದೆಯೆಂದರೆ ನಮ್ಮ Central Government guidelines ಪ್ರಕಾರ ಕಡಿಮೆ borrowing ಆಗಿದೆ. Government of Indiaದ new norms ಪ್ರಕಾರ ಈ ವರ್ಷದ borrowing ಸ್ವಲ್ಪ ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ :- ಇಲ್ಲ ನೀವು Economic Survey ನೋಡಿದರೆ borrowings ಜಾಸ್ತಿನೇ ಇದೆ. ನಾನು ನಾಳೆ ನಿಮಗೆ ತೋರಿಸಿಕೊಡುತ್ತೇನೆ. This is not the correct reply. ಅವರ ಹತ್ತಿರ ತಿಳಿದುಕೊಂಡು ನಾಳೆ ಸರಿಯಾಗಿ ಹೇಳಿ. ಅವರು ನಿಮಗೆ ಸರಿಯಾಗಿ convince ಮಾಡಿಲ್ಲ. ಹೋದ ವರ್ಷದ ಬಜೆಟ್‌ನಲ್ಲಿ ಇದೇ ರೀತಿ ಇದೆ. ಈ ವರ್ಷದ ಬಜೆಟ್‌ನಲ್ಲಿ ಇದೇ ರೀತಿ ಇದೆ. ನೀವು ಏನು ಮಾಡಿದ್ದೀರೆಂದರೆ ಒಂದು ಲಕ್ಷ ಕೋಟಿ ರೂಪಾಯಿಯ ಬಜೆಟ್ ಮಂಡಿಸುವ ಆತುರದಲ್ಲಿ ಈ ರೀತಿ ಏನೋ ಮಾಡುವುದಕ್ಕೆ ಹೋಗಿದ್ದೀರಿ. ಲಕ್ಷ ಲಕ್ಷ ಕೋಟಿ ಎಂದು ಅದು ತಲೆಯಲ್ಲಿ ಉಳಿದುಕೊಂಡುಬಿಟ್ಟಿದೆ. ಮಾನ್ಯ ಬಚ್ಚೇಗೌಡರೆ, ನೀವು ಇದನ್ನು ಓದಿದ್ದೀರಾ? ಸುಮ್ಮನೆ ಕುಳಿತುಕೊಂಡು ಹೇಳಿಬಿಡುತ್ತೀರಲ್ಲ? ಈಗ ಹೇಳಿ ಬಜೆಟ್ ಎಸ್ಟಿಮೇಟ್ಸ್ 83,000 ಕೋಟಿ ರೂಪಾಯಿ, revised estimates 78,000 ಕೋಟಿ ರೂಪಾಯಿ ಇದೆ. ಏಕೆ ಎಂದು ಹೇಳಿ ನೋಡೋಣ. ಮಾನ್ಯ ಮುಖ್ಯಮಂತ್ರಿಗಳೇ, ನೀವು ನಾಳೆ ಹೇಳಿ, ಅವರಿಗೆ ಗೊತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :- ಆಯಿತು.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, State Highway projectsಗೆ PWD ಇಲಾಖೆಗೆ 500 ಕೋಟಿ ರೂಪಾಯಿಯನ್ನು ಮತ್ತೆ ಇಟ್ಟಿದ್ದೀರಿ. ಕಳೆದ ಸಾರಿ ಬಜೆಟ್‌ನಲ್ಲಿ ಸಾವಿರ ಕೋಟಿ ರೂಪಾಯಿ ಪ್ರಸ್ತಾಪವಾಯಿತು. ಮತ್ತೆ ಏಕೆ Supplementary Budgetನಲ್ಲಿ ಇಟ್ಟಿದ್ದೀರಿ?

ಅಧ್ಯಕ್ಷರು :- ಈಗ ಹೇಳಿದರಲ್ಲ?

ಶ್ರೀ ಕೆ.ಎಂ. ಶಿವಲಿಂಗೇಗೌಡ :- State Highway projectನಲ್ಲಿ tender ಕರೆದಿಲ್ಲವಲ್ಲ. ಅದು ಏಕೆ ಎಂದು ಹೇಳಬೇಕಲ್ಲ, ಸುಮ್ಮನೆ State Highway project ಎಂದರೆ ನಾವು tender ಕರೆಯುತ್ತಾರೆಂದು ಕಾದುಕೊಂಡು ಕುಳಿತಿದ್ದೇವೆ. ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಸ್ವಲ್ಪ ಉತ್ತರ ಹೇಳಿ ಸ್ವಾಮಿ. State Highway project ನಲ್ಲಿ ಸಾವಿರ ಕೋಟಿ ರೂಪಾಯಿ ಪ್ರಸ್ತಾಪವಾಯಿತು. ಅದಕ್ಕೆ tender ಕರೆಯಲಿಲ್ಲ, ಅದು ಖರ್ಚಾಗಲಿಲ್ಲ. ಮತ್ತೆ 500 ಕೋಟಿ ರೂಪಾಯಿ ಯಾವ ಹೆದ್ದಾರಿಗೆ ಹೇಳಿದರು? ಮಾನ್ಯ ಅಧ್ಯಕ್ಷರೆ, ಅದನ್ನು ಅವರು ಹೇಳಬೇಕಲ್ಲ. ಹಾಗಾದರೆ ಮಾನ್ಯ ಸದಸ್ಯರುಗಳು ಕೇಳಿದ ವಿಚಾರಗಳಿಗೆ ಗೌರವ ಇಲ್ಲವೇ?

ಅಧ್ಯಕ್ಷರು :- ಆಯಿತು, ಯಾರು ಕೇಳುವುದು ಬೇಡ ಎಂದು ಹೇಳಿದ್ದಾರೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮತ್ತೆ ನಾವು ಕೇಳಿರುವುದಕ್ಕೆ ಉತ್ತರ ಏನಾದರೂ ಹೇಳಿದರಾಯಿತು.

ಅಧ್ಯಕ್ಷರು :- ನೀವು ಆಗಿನಿಂದ ಕೇಳುತ್ತಲೇ ಇದ್ದೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- State Highway projectಗೆ ಸಾವಿರ ಕೋಟಿ ರೂಪಾಯಿಯಾದರೆ, ಈ 500 ಕೋಟಿ ರೂಪಾಯಿ ಏತಕ್ಕೆ ಎಂದು ಹೇಳಿ. ಅವರು ಏನಾದರೂ ಒಂದು ಉತ್ತರ ಹೇಳಲಿ.

ಅಧ್ಯಕ್ಷರು :- ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ನೀವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇವೆ. ಹಾಗಲ್ಲ, ಅವರು ಸ್ವಲ್ಪ ಹೇಳಲಿ. ಹಾಗಾದರೆ ನಾವು ಕೇಳಿದರೆ ಏನೂ ಹೇಳಬಾರದು ಎಂತಲಾ?

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : - ಏನಾದರೂ ಮುಚ್ಚಿಕೊಳ್ಳಲಿ ಅದು ನನಗೆ ಗೊತ್ತಿಲ್ಲ.

ಅಧ್ಯಕ್ಷರು :- 2011-12ನೇ ಸಾಲಿನ ಪೂರಕ ಅಂದಾಜುಗಳು ಮೂರನೇ ಹಾಗೂ ಅಂತಿಮ ಕಂತು ಬೇಡಿಕೆಗಳ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ. "ದಿನಾಂಕ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1 ರಿಂದ 24 ಮತ್ತು 26 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ

ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ".

ಪ್ರಸ್ತಾವದ ಪರವಾಗಿರುವವರು **ಹೌದು** ಎಂದು ಸೂಚಿಸಬೇಕು.
ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು.
ಪ್ರಸ್ತಾವ **ಹೌದು** ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವ **ಹೌದು** ಎನ್ನುವವರ ಪರವಾಗಿದೆ
ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 1 ಕೃಷಿ ಮತ್ತು ತೋಟಗಾರಿಕೆ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕೃಷಿ ಮತ್ತು ತೋಟಗಾರಿಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 2460.17 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 2 ಪಶು ಸಂಗೋಪನೆ ಮತ್ತು ಮೀನುಗಾರಿಕೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 4962.12 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 908.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 3 – ಆರ್ಥಿಕ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರ್ಥಿಕ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 105000.00 ಲಕ್ಷಗಳು ಮತ್ತು

ಬಂಡವಾಳ ಲೆಕ್ಕದಲ್ಲಿ 15200.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 4 – ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 1500.90 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 5 – ಒಳಾಡಳಿತ ಮತ್ತು ಸಾರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 7746.13 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 2900.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 6 – ಮೂಲಭೂತ ಸೌಕರ್ಯ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಬಂಡವಾಳ ಲೆಕ್ಕದಲ್ಲಿ 200.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 7 – ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ರಾಜಸ್ವ ಲೆಕ್ಕದಲ್ಲಿ ಬರತಕ್ಕಂಥ 15355.46 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 67836.72 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 8 – ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಜೀವಿ ಮತ್ತು ಪರಿಸರ ಇಲಾಖೆಗೆ ಸಂಬಂಧಿಸಿದ

ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ರಾಜಸ್ವ ಲೆಕ್ಕದಲ್ಲಿ ಬರತಕ್ಕಂಥ 833.31 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 9 – ಸಹಕಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 3553.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 90.72 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 10 – ಸಮಾಜ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 6929.11 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 11 – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 51448.98 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 712.61 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 98.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರೀಕ ಸರಬರಾಜು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 20.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 14 – ಕಂದಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 9654.78 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 15 – ಮಾಹಿತಿ ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 88.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 16 – ವಸತಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಸತಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 567.71 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ

ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 12042.57 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 2000.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕಾ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 21187.15 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 2735.81 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 3490.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 9572.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 16178.71 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 76082.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 21 – ಜಲ ಸಂಪನ್ಮೂಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ

ಲೆಕ್ಕದಲ್ಲಿ 4527.68 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 4546.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 2623.93 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 652.50 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 11.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 912 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 24 – ಇಂಧನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇಂಧನ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 75000.00 ಲಕ್ಷಗಳು ಮತ್ತು ಬಂಡವಾಳ ಲೆಕ್ಕದಲ್ಲಿ 50000.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 26 – ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ

ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 189.14 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 27 – ಕಾನೂನು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾನೂನು ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 325.35 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.2012 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ರಾಜಸ್ವ ಲೆಕ್ಕದಲ್ಲಿ 378.00 ಲಕ್ಷ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

5. ಶಾಸನ ರಚನೆ

ಅ) ವಿಧೇಯಕದ ಮಂಡನೆ ಮತ್ತು ಪರ್ಯಾಲೋಚನೆ

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2012

ಅಧ್ಯಕ್ಷರು :– ಈಗ ವಿಧೇಯಕಗಳನ್ನು ಮಂಡಿಸುವುದು, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾವನೆಯನ್ನು ಮಂಡಿಸಬೇಕು.

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ,

"2012ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು :– ಪ್ರಸ್ತಾವನೆ ಮಂಡಿಸಲಾಯಿತು.
ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :